ಭಾಗವತ ಪುರಾಣದೊಳಗಿನ

ಕಾರ್ತವೀರ್ಯಾರ್ಜುನನ ವಧೆ.

॥ವೃತ್ತ॥ ಶ್ರೀಪಾಲಂವೃಂದವಿತಪದಂ । ಲೋಕಾಸ್ಪದಂ ಮಾಧವಂ। ಗೋಪಾಲಂ ಪ್ರಿಯವಿದ್ಯಚರಿತಂ । ಜೈವಾತೃಕಂ ಭಾರ್ಗವಂ ॥೧॥

॥ ರಾಗ ಸೂಜಿ಼ ಜಂಪೆತಾಳ ॥

ಜಯತುಗಿರಿಜಾಪುತ್ರ । ಜಯತುಕೋಮಲಗಾತ್ರ ಜಯತುಗುಣ ಸ್ತೋತ್ರ ಜಯತುಸತ್ಪಾತ್ರ । ಜಯತುಜಯತು ॥೧॥

॥ ದ್ವಿಪದೇ ॥

ಗಿರಿಪುತ್ರಿವಾಣಿ ಲಕ್ಷ್ಮಿಯರಪದಗಳಿಗೇ ॥ ಯರಗಿಭುವನತ್ರಾಣಪುತ್ರಹನುಮನಿಗೇ ॥೧॥ ಕರಮುಗಿದುಸನಕಾದಿಯೋಗಿಸಜ್ಜನರಾ। ಚರಣವನು ಸಂಸ್ತುತಿಸಿಗುರುಕವೀಶ್ವರರಾ ॥ ಬಲವಂದುನಾನಿಷ್ಟ ದೇವತೆಯುಮನದೀ । ಅಲಸದೇಧ್ಯಾನಿಸುವೆಬಿಡದೆಅನುದಿನದೀ ॥೨॥ ಸ್ಕಂದಪೌರಾಣದೊಳು ಹರತನುಜಸುರರಾ । ವೃಂದವನುಸಲಹು ವಡೆನಿಖಿಳಭೂಭುಜರಾ । ಕೊಂದಕಥೆಯನುಈಶನುಡಿಸಿದಂದದಲೀ । ಚಂದದಲಿಪೇಳುವೆನುಘನವಿಲಾಸದಲೀ॥ ವರಪ್ರಾಜ್ಞರಾಲಿಸುತಶೂನ್ಯವಿರಲದನೂ ॥ ಪರಿಹರಿಸಿಮೆರಸುವದು ಪುಣ್ಯಕಥನವನೂ ॥೩॥

॥ ರಾಗ ಸೌರಾಷ್ಟ್ರ ಶ್ರಿವುಡೆತಾಳ ॥

ಸ್ಕಂದಪರ್ವತದೊಳಗೆಪರಮಾನಂದದಿಂಹರತನುಜ ಮುನಿಜನ

ವೃಂದವೊಡನೆಸೆದಿರಲುಋಷಿಗಳುಸ್ಕಂದನಡಿಗೇ॥ಯರಗಿಕೇಳಿದರಚ್ಯುತನುಭೂಸುರರಜನ್ಮವಪಡೆದುಭೂಪರತರಿದರೇತಕದೇನವಮಾಡ್ದರುಧರೆಯಧಿಪರೂ ॥ ೨ ॥ ದೋಷವನುಮಮಮನದಘನಸಂ ದೇಹಹೋಹಂದದಲಿಪೇಳೆನೆ।ಬಾಹುಲೇಯನುನಗುತದೇವವ್ಯೂಹನಾಥನಾ॥೩॥ ಪಾದಕಮಲವಮನದಿನೆನದುರೆಮೋಹದಿಂದಾಸುರಲ್ಕೆ ತೊಡಗಿದನಾದಿಪುರುಷನ ಪುಣ್ಯಚರಿತವನಾದಿಯಿಂದಾ ॥೪॥

ರಾಗ ಭೈರವಿ ಜಂಪೆತಾಳ

ಮುನಿನಿಕರನಿವೇಕೇಳಿಚಿನುಮಯನಮಹಿಮೆಯನುವಿನಯದಿಂದಾಲಿಪ್ರದುಜನಪನಿಕರದೊಳು ॥೧॥ ಘನತರದಬಲನೆನಿಪಕಾರ್ತವೀರ್ಯಸುತಜನಪರನು। ಕೊಲಿಸಿದನುದಾರುಣಿಯೊಳಂದೂ ॥೨॥ ಅರುಹುವೆನಿಮಗದನು ತಿಳಿವವೋಲೆನೆ ಪ್ರಶ್ನೆಗಿರಿಸಿದರು ಶೌನಕನಘಣಸುರರಂದೂ ॥೩॥

॥ ವಾರ್ದಿಕ್ಯಾ ॥

ಹರಸುತನುಶೌನಕಂಗೊರೆಯಲಾರಂಭಮಂ। ವಿರಚಿಸಿದನೆಲೆಮುನಿಪ ಕೇಳ್ವಿಧಿಯಮಾನಸದಿ। ತರಳಜನಿಸಿದನತ್ರಿಯಂಬವಂ ಬಳಿಕವನನೇತ್ರದಿಂದೊಗೆದನಿಂದೂ॥ ಗುರುಪತ್ನಿಯಂನೆರೆಯೆಜನಿಸಿದಂಬುದನವಗೆತರುಣನಾದಂಪುರೂರವನು। ಸುರತರುಣಿಯಂ ನೆರೆಯುಲುದಿಸಿದಂ ನವಂಗಾಯುಕುಮಾರಕಂ। ಅವಗೆಜನಿಸಿದಂನಹುಷನೃಪನೂ॥೧॥ ಜನಿಸಿದನವಂಗಾಯುಯಾತಿಯಂಬಾತ್ಮಜ ದನು ಜಗುರುಪುತ್ರಿಯಿಂದುದಿಸಿದಂಹೈಹಯಂವೀರನೆಂಬಾತನವನಾ। ತನಯನಾದಂಕುಂತಿಯವನಮಗನೆಂದೆನಿಸಿದಂ ಮುನಿಪಕೇಳ್ಭದ್ರಸೇನಾತ್ಮಜಂಸನಕನೆಂಬವಂ ಭದ್ರಸೇನಗುದಿಸಿದನವಗೆಜನಿಸಿದಕೃತವೀರ್ಯನೂ॥

॥ ಭಾಮಿನಿ ॥

ಕ್ಷಿತಿಪಕೃತವೀರಾಖ್ಯಮಾಹಿಷ್ಮತಿ ಪುರಾಧಿಪನೆನಿಸಿ। ರಾಜ್ಯನತಿ

ಶಯದಿಪಾಲಿಸುತಲಿರಲೊಂದಿವಸವಾನೃಪನಾ ॥ ಸತಿಯುಸಂಧ್ಯಾ
ಕಾಲದೊಳು ಭೂಪತಿಯಪೊರೆಗೈತಂದುತನ್ನೊಳು । ಸುತನಕಾಮಿ
ಸಿನುಡಿದಳರಸಗೆ ನಿಜಮನೋಗತವಾ ॥೧॥

ರಾಗ ಕೇತಾರ ಗೌಳ ಅಷ್ಟತಾಳ ॥

ಕಾಂತಾನಿಲಾಲಿಸಿಕೇಳೆನ್ನಮನದೊಳು । ಚಿಂತೆಯೊಂದಿಹುದ
ನೂಸಂತೋಷದಿಂದುಸುರೆನಲರುಹುವೆನೆಂಬ ಕಾಂತೆಯೊಳಿಂತೆಂದ
ನೂ ॥೧॥ ತರುಣಿನಿನ್ನಯಚಿಂತೆಯೇನಾದನೆನ್ನೊಳುಬರೆಶ್ರೇಷ್ಟದಿಂ
ದದನೂ॥ ಪರಿಪರಿಸುವಸತ್ವವೆನಗಿರಲಾಪರಿವಿರಚಿಪೆನೆಸಲೆಂದಳು॥೨॥
ಬಾಲಕರಿಲ್ಲೆಂದುನಿಂದಿಸುವರುಯನ್ನ । ಅರಿಯಲೀಜಗದೀ । ಭೂ
ಲೋಲಕೇಳ್ಸುತರಿಲ್ಲದಾತಗೆ ತ್ರಿದಶರಾಲಯದೊರವುದೇನೈ ॥೩॥
ಕಾಮಿನಿರನ್ನೆ ಸತತಮನಸಿನೊಳು । ಕಾಮಜನಕನನೀನೂ ॥ ನೇಮ
ದಿಭಜಿಸುತ್ತಲಿರುಮಗನಹನುಸುತ್ರಾಮನವಿಭವೆಂದಾನೂ॥೪॥ ರಮ
ಣಕೇಳಾತ್ಮಜನಹನುಮುಂದೆಂದೆನ್ನ । ಭ್ರಮೆಗೊಳಿಸುವದೆತಕೇ ॥
ಸುಮಶರ ಮನವಸೂರೆಯಗೊಂಡನೆರೆಯನ್ನ ಮಮತೆಯಿಂದೀಕ್ಷ
ಣಕೇ॥೫॥ ರಾಗ ಬೇಗಡೆ ತ್ರಿವುಡೆ ತಾಳ

ಮುನಿಪತಿ ಕೇಳುನಾಪೇಳ್ವ ವಾಕ್ಯವನೂ । ವನಿತೆಗೆಭೂಪಪೇ
ಳ್ದುದಪೇಳ್ವೆನಾನು ॥ ತರುಣಿಕೇಳ್ನಿನ್ನಯಮನದಿಂಗಿತವನೂ ॥ ಆ
ರಿತೆನುಸ್ಥೈರಿಸುಅರೆತಾಸುನಿನೂ॥ಶರಜಬಾಂಧವನಸ್ತಮಯವಾಗುವಾ
ಗದುರುಳದೈತ್ಯರುಚರಿಸುವಕಾಲವೀಗ ॥೧॥ ಎನಲೆಂದಳೆಲೆಕಾಂತಹಸಿ
ದವ್ಯಾಳ್ಯದಲ್ಲಿ । ಮನುಜನಿಗನ್ನದೊರಕದೆಕಡೆಯಲಿ । ಘನವಾದವ್ಯ
ಷ್ಠಾನ್ನ ದೊರದರೆನ್ಫಲವೂ ॥ ತನುವಭೇದಿಪುದೀಗ ಮನ್ಮಥ
ಶರವೂ ॥ ೨ ॥ ತರುಣಿಕೇಳ್ನಾವೀಗ ಲೊಡಗೂಡೆಮಗನು ಧರಣಿ
ಯೊಳಗಧಿಕ ದುರಳಜನಿಸುವನು ॥ ಅರೆಕ್ಷಣತಡೆನಿನ್ನ ಮನಸಿನಾ
ಭೀಷ್ಟದೊರವೂದುನಿನಗೆಜನಿಸುವನುಶ್ರೇಷ್ಠ ॥ ೩ ॥

ಕಂದಪದ್ಯ.

ಪತಿಯಿಂತೆನಲಾ ನುಡಿಯಂ । ಸತಿಲಾಲಿಸಿಸ್ಮರಶರಹತಿ ಯಿಂದುರೆನೊಂದಾ ॥ ಕೃತುವೀರ್ಯನ ನವನಾಸತಿಬೇಗದಿತೆಗೆದಪ್ಪಿ ದಳೈಸಂತಸದಿಂ ॥ ೧ ॥

ವಾರ್ಧಿಕ್ಯ.

ಸುರಕಲ್ಪಭೂಜವಂನಾಶ್ರಯಿಸಿಹಬ್ಬಿರ್ದವರಕನಕಲತೆಯೊ ಮೋಣಘನಚಂದನದ್ರುಮದ ಪರಿಮಳಕೆ ಮರುಳಾಗಿ ಸುತ್ತಿಕೊಂಡಿರ್ದಹಿಯೊ । ಧರೆಯ ಯೋಗೀಶ್ವರರನೂ ॥ ನೆರೆಬಂಧಿಸುವಸ್ಮರನಪಾಶವೊನೃಪವರನ ಉರವಬಿಗಿದಪ್ಪಿರ್ದರಾಕಾವತಿಯಭುಜವೋಬರೆಯಲರಿದೆನಲೆಸದವಂಗನೆಯ ನಳಿತೋಳ್ಗಳೇನೆಂಬೆನಾಶ್ಚರ್ಯವಾ ॥ ೧ ॥

ಭಾಮಿನಿ.

ಇಂತುತನ್ನಯತಕ್ಕೈಸಿದನಿಜಕಾಂತೆಯನು ತಾತಿಳುಹಲಾರದೆಕಂತುಪಿತನೇ ಗತಿಯನುತ ಕೂಡಿದನುವಲ್ಲಭೆಯೂ ॥ ನಿಂತುದಬಲೆಗೆಗರ್ಭನವಮಾಸಾಂತರದಿ ಜನಿಸಿದನು ಪೃಥ್ವೀಕಾಂತನಿಗೆ ಭುಜಹೀನಮಗನೇನೆಂಬೆವಿಸ್ಮಯವಾ ॥ ೧ ॥

ರಾಗ ರೂಪಕತಾಳ.

ಕರವಿಲ್ಲದಿಹಪುತ್ರನನು ಕಂಡು ಭೂಪತಿ ತನ್ನ ರಮಣಿಗಿಂತೆಂದಪೂರ್ವದಲೀ ॥ ೧ ॥ ಪೇಳಿದರೆಮಾತನಂದಿನಲಿನೀಕೇಳದೆ ಕೆಡಸಿದೆ ಮಗನಾ ॥ ತೋಳಿಲ್ಲದವಪುಟ್ಟಿ ಫಲವಿಲ್ಲದಾಯ್ತೆನೆ । ಕಾಳಾಹಿವೇಣಿ ತಾಪತಿಗೆರಗಿ । ಒರದಾಳುಮತ್ಕಾಂತಕೇಳೆಮ್ಮವಂಶಕ್ಕೆ ಗುರುವಾಗಿರುವನತ್ರಿಸುತನು ॥ ಕರುಣಾಳುಬಳಿಗೈದಿದರೀವನುಕರವನಂದನನಿಗೆಮುನಿಯೂ ॥ ೨ ॥ ಕರುಣಿಸುನೇಮದ ಪೋಪೆನೆಂದರೆ ಭೂಪತೆರಳೆಂದುನೇಮವಕೊಡಲೂ ॥ ತರಳನನೊಡಗೊಂಡುಬಂದು ನಿತ್ಯದಿಋಷಿವರನಸೇವೆಯ ನೆಸಗಿದಳೂ ॥ ೪ ॥

ಭಾಮಿನಿ.

ದಿನದಿನ ಸೇವೆಯನು ವಿರಚಿಪ ವನಿತೆಗೊಂದಿವಸದೊಳು । ಯತಿಕುಲವನಜಭಾಸ್ಕರನೆಂದ ನಿನ್ನಯ ಮನದಬಯಕೆಯನೂ ॥ ವಿನಯದಿಂದುಸುರೀವೆನೆನೆ ಮತ್ತ್ರನುಜನಿಗೆ ಭಾಹುಗಳಕೊಡುಮೇಣ ಘನತರೈಶ್ವರ್ಯವನುಕೃಪೆಮಾಡೆಂದಳಬುಜಾಕ್ಷಿ ॥ ೧ ॥

ರಾಗ ಸಾರಂಗ ಅಷ್ಟತಾಳ.

ವನಿತೆಯಾಡಿದಮಾತ ಮುನಿಕೇಳಿನೃಪತನುಜಗೆಂದನುತೋಷವಾತಾಳಿ ॥ ನಿನಗೆಸಾವಿರಭುಜವಾಗಲೀಸರ್ವಜನಸರು ನಿನಗಂಜಿ ನಡೆಯಲಿ ॥ ೧ ॥ ಸಿರಿವಂತನಾಗಿಧರೆಯನೂ । ಬಹುವರುಷಪಾಲಿಸುತಿರು ನಿನ್ನನು । ಸ್ಮರಿಸಿದಜನರಿಗೆ ಭಯಗಳು । ದೊರದಿರಲಿಯನ್ನಕೃಪೆಯೊಳು ॥ ೨ ॥ ಯನಲೆಂದಮುನಿಪತಿಕೇಳು । ಯನ್ನಮನದೊಳಗಿರುವದನ್ನುಕರುಣಾಳು । ಅನುಮಿಷನರನಾಗಲೋಕದ ದೊರೆತನವನು ಕರುಣಿಸುಬೇಗದಿ ॥ ೩ ॥ ಚಕ್ರವರ್ತಿತ್ವದಲಿ ಯಿಳೆಯಾನು । ಘನವಿಕ್ರಮಾದಿಂದಾಳುಧರೆಯಾನು । ಶಕ್ರನಾಗೇಂದ್ರದ್ಯರದಟನೂ । ಮುರಿದಾಕ್ರಮಿಸುವಾ ಧೀರರಪುರವನ್ನೂ ॥ ೪ ॥ ಹರನೆಮುಂತಾಗಿಸಂಗರದೊಳುನಿನ್ನ ತರಿಯಲರಿದುಪರಬಲದೊಳೂ॥ ಧರಣಿಯುಮರರವೈರವನೀನೂ । ಮಾತ್ರ ವಿರಚಿಸೆಕೆಡುವೆಕೇಳೆಂದನೂ ॥ ೫ ॥

ಕಂದಪದ್ಯ.

ಕರುಣದೊಳೀಪರಿವರಮಂ । ಧರಣಿಪತರಳಗೆಕೊಟ್ಟು ಮುನಿಪತಿನಲವಿಂ ತೆರಳಿನ್ನಾಲಯಕೆಂದೀ ಪರಿಯಿಂದಪ್ಪಣೆಯಕರುಣಿಸುತಾಗಳ್ ॥ ೧ ॥

ವಾರ್ಧಿಕ್ಯ.

ತಾಪಸೇಶ್ವರನೊಳಪ್ಪಣೆಗೊಂಡು ವೇಗದಿಂದಾ ಪತಿವ್ರತೆ

ಪುತ್ರಸಹಿತಂದು ಕೃತವೀರ್ಯಭೂಪನಿರ್ದಡೆಗೈತಂದು ತದ್ವಾತ್ಕಾಲಂ ತಮಂ ಪೇಳೆ ಕೇಳಿನೃಪನೂ ‖ ತಾಪರಮಸಂತೋಷದಿಂ । ಕೆಲವು ದಿನದಮೇಲಾ ಪುರಪತಿತ್ವಮಂ । ಮಗಗಿತ್ತುತಪದಿಂದ ಗೋಪಾಲ ನಂವರಿಸಿ ಸುರನಿಕರಭಾಪೆನಲ್ ಕೈವಲ್ಯಮಂಪಡೆದನೂ ‖ ೧ ‖ ಮುನಿಪೇಳ್ ಕೃತವೀರ್ಯನಣುಗನು ಸಂಗ್ರಾಮದೋಳ್ಮನುಜದೇವೋರಗಾಸುರನಿಕರಮಂಗೆಲ್ದು ಘನಬಲಾನ್ವಿತನಾಗಿ ಮಾಹಿಷ್ಮತೀಪುರದೊಳತಿಸುಖದೊಳಿರುತಿರ್ದನೂ ‖ ಮನುಜರೋಳ್ಸುಖಿಗಳಲ್ಲದೆ ವಿಮನಸರ್ಕಳಿಲ್ಲನುಪಮೈಶ್ವರ್ಯಯುತರೆಲ್ಲ ದಾರಿದ್ರರಿಲ್ಲನಘಪಾಪಯುತರಿಲ್ಲರಾಕಾವತಿಯ ನಂದನನಾಳುವ ಮಹಿಯೊಳೂ ‖ ೨ ‖

ರಾಗ ಸೌರಾಷ್ಟ್ರ ತ್ರಿವುಡೆತಾಳ.

ಯಿತ್ತಲವನಿಪನೀಪರಿಯೊಳಿರಲತ್ತ ಲಂಕಾಪುರದಿದಾನವಮೊತ್ತದೊಡ್ಡೋಲಗದೊಳೊಂದುದಿನ ಹತ್ತುಮೊಗದಾ ‖ ೧ ‖ ಕಳಕುಲೇಶ್ವರನಗುತ ತನ್ನಯ ಬಳಿಯೊಳಿರುವ ಪ್ರಹಸ್ತಗೆಂದನು ಅಳವಿಗೊಟ್ಟಿನ್ನೊಡನೆ ಗೆಲುವವರಿಳೆಯೊಳಿಲ್ಲಾ ‖ ೨ ‖ ಸುರಪಮುಖ್ಯರಗೆಲಿದಿಹೆನು ಸರಸಿರುಹಭವಪ್ರಪಿತಾಮಹನು । ಸ್ಮರಶರನು ಮೆಚ್ಚಿದನೆನ್ನ ಸತ್ವಕೆಧುರದೊಳಿನ್ನೂ ‖ ೩ ‖ ಹರಿಯನೋರ್ವನಗೆಲಿದರರಿಗಳು ಧರೆಯೊಳಿಮಗಿಲ್ಲೆನಲುಕೇಳುತ । ಮೊರದನಣ್ಣಗೆಕಲಿವಿಭೀಷಣಕಿರುನಗೆಯೊಳೂ ‖ ೪ ‖

ರಾಗ ಕೇತಾರಗೌಳ ಜಂಪೆ ತಾಳ.

ಅಸುರೇಂದ್ರನೇಕೇಳು ನುಡಿಯಾ । ಸಂಗರಕೆಅಸುರಹರನೇಕೆಧರೆಯಾ । ಅಸಮಸಹಸಿಕರಿಹರೂ । ನಾತೋರ್ಪೆವಸುಮತೀಪಾಲಕರೊಳೂ ‖ ೧ ‖ ಸಹಜಕೇಳಾಹವದೊಳು । ಮಿಾಟಾದ ಮಹಿಪರೆಲ್ಲರಧುರದೊಳೂ ‖ ಅಹಿವೈರಿಮುಖ್ಯಸುರರಾ । ಗೆಲ್ದಿನ್ನ ಸಹಸಿಗಳ ಕೇಳ್ದರರಿಯಾ ‖ ೨ ‖ ತವೆಪರಾಕ್ರಮಿನಾನೂ । ಅರಿತಿಹೆನುವಿವರಿಸು

ವದೇನದರನೂ । ಭುವನದೊಳುವೀರರಿಂಗೇ ಮೇಲೆನಿಸಿದವರಿಹರು ಕೇಳುಹಿಂವೇ ॥ ೩ ॥ ತಮ್ಮ ಕೇಳೀಗರಸಿಯಾ । ಮದ್ಯದಲಿನಮ್ಮ ನರಿಯಾವನೊರೆಯಾ ॥ ೩ ॥ ಒಮ್ಮೆ ನಿತ್ತೋಂವರನೂ । ಮಡುಹದಿರೆಬೊಮ್ಮ ಕುಲದವನೇತಾನೂ ॥ ೪ ॥ ಯನಲೆಂದನಣ್ಣ ಕೇಳು । ಕೃತವೀರ್ಯಾತನುಜಭೂಪಾಲಕರೊಳೂ । ಘನಬಲಾನ್ವಿತನಾತಗೇ । ಸರಿಯಿಲ್ಲ ಅನಿಮಿಷಖಳಾದ್ಯರೊಳಗೇ ॥ ೫ ॥

ಬಾಮಿನಿ.

ಅನುಜನೆಂದಾಮಾತಕೇಳ್ದಾದನುಜಪತಿ ಹೈಹಯಜನಪತಿಯ ಸದೆಬಡಿವೆನೆನುತ ತುಬ್ಬಣವನುರೆಜಡಿದೂ ॥ ದನುಜಸೇನಾಸಾಥರಿಗೆ ಬೇಗನುವರಕೆಪೊರಡುವುದೆನುತಾ । ತಾಮನದಿ ಶಂಭುವನೆನೆದು ಗಮನೊದ್ಯೋಗಪರನಾದಾ ॥ ೧ ॥

ವಾರ್ಧಿಕ್ಯ.

ಕೋಪದಿಂ ದಶಮುಖಾ ಮಹಾಬಲವನೊಡಗೊಂಡು । ಭೂಪತಿಯಪುರಕೆ ಬರಲಿತ್ತವಿಪ್ರಕೇಳ್ ಗೋಪಂ । ವಧೂವ್ರಾತದೊಡ ಜಲಕೇಳಿಗೆಂದಾ ನರ್ಮದಾತಟವಿಗೇ ॥ ತಾಪೋಗಿರುವವ್ಯಾಳ್ಯದೊಳಗಿತ್ತರಾವಣಂ । ತಾಪಯಣದಿಂದ ಮಾಹಿಷ್ಮತೀಪುರಕೆ ಬಂದಲ್ಲಿರುವಚಾರನಂಕರದು ನಸುನಗುತಲಿಂತೆಂದನೂ ॥ ೨ ॥

ರಾಗ ಕಾಂಬೋದಿ ಜಂಪೆ ತಾಳ.

ಸಂದೇಶಹರನೆಕೇಳರುಹು ನಿಮ್ಮರಸಗಾಬಂದಿಹುದು ಧುರಕೆ ಶೀಗ್ರದಲೀ । ಮಂದಿಮಾರ್ಬಲವನೊಡಗೊಂಡು ಬರಹೇಳುಶಿರಲೆಂದನಾದೂತನೊಲವಿನಲೀ ॥ ೧ ॥ ದೈತ್ಯಜರಾಜಕೇಳಿಲ್ಲಿ ನಗರದೊಳುಕಲಿ । ಭೂತಲೇಶ್ವರನು ನಾರಿಯರಾ । ವ್ರಾತಸಹನ್ರೈದಿದನುಬರುವನರಘಳಿಗೆ ನೀತಡದರೀಗಲೆಮ್ಮರಸಾ ॥ ೨ ॥ ಯನಲೆಂದನಿಮ್ಮಾಳ್ದನಾವಾರಾಣ್ಯಕೆ ಪೋದನೆನುವದನು ಪೇಳುತನಗಿಂದೂ ॥

ಘನಬೇಗದಿಂದನಾನಲ್ಲಿಗೈದುವೆನೆನಲು ಧನುಜಗಿಂತೆಂದಚರನಂದೂ ॥ ೩ ॥ ಯಿಂದುವಿಂದೊಗದ ನರ್ಮದವೆಂಬನದಿಗೆ ಸಖಿವೃಂದಸಹಹೋಗಿಹನೃಪನೂ ॥ ಬಂದಪನುವಾನೇಪುದೆಪೋಕೆ ನಿಮಷಕೆಂದು ನೃಪಕಾಲಭೈರವನೂ ॥ ೪ ॥

ಭಾಮಿನಿ.

ಚರನನುಡಿಗೇಳುತ್ತಲಂಕಾಪುರದರಸು ಬಲವೆರಸಿ ಆತನಾನರಸುತ್ತೈದಲಿನಿತರಲಿ ಮಧ್ಯಾಹ್ನವಾದುದನೂ ॥ ಪರಿಕಿಸುತಶಂಕರನ ಪೂಜೆಯವಿರಚಿಸುವೆನೆಂದೆನುತ ಮಳಲೊಳುಲಿಂಗವಮಾಡಿಕುಳಿತನು ನರ್ಮದಾತಟದೀ ॥ ೧ ॥

ವಾರ್ಧಿಕ್ಯ.

ಯಿತ್ತಲಸುರಂಲಿಂಗಪೂಜೆಯಂ । ಮಾಡುತಿರಲತ್ತಲಾ ನದಿಯಕೆಳಭಾಗದೊಳಗಬಲೆಯರ ವೊತ್ತದೊಡನವನಿಪಂ । ತನ್ನಬಾಹುಗಳಿಂದ ಕಟ್ಟೆಯಂಕಟ್ಟಿಕೊಂಡೂ ॥ ಮತ್ತದಂತಿಯತೆರದೊಳಾಡುತಿರೆ ಜಲವೇಲಕುತ್ತರಿಸಿ ಬಂದಸುರನೆಸಗುತಿಹ ಶಿವಪೂಜೆಗಿತ್ತುದೈವಿಘ್ನವಂ । ದೈತ್ಯನದರಿಂದ ಚರನಂಕರಯುತಿಂತೆಂದನೂ ॥೧॥

ರಾಗ ಸೌರಾಷ್ಟ್ರ, ತ್ರಿಪುಡೆ ತಾಳ.

ದೂತಕೇಳೀಪರಿಯೊಳೀ ಜಲವೇತಕಉಕ್ಕುತಬಂದಿತೆಂಬುದನೀಃತಿಳಿದುಬಂದರುಹುಬೇಗೆನೆನಲಾತಜವದೀಬಂದುನೃಪನಿಹುದರಿತುರಾವಣಗೆಂದ ನೈತನ್ನೊಡೆಯಲಾಲಿಸು । ಯಿಂದುಮುಗಿಯರುಸಹಿತರಸಭುಜವೃಂದದಿಂದಾ ॥ ಶರವತರಿದಾಡುತ್ತಲಿಹನೆನೆದುರುಳ ತಾನಾಲಿಸುತಕೋಪದಿ ಪೊರಟನವನಿಪ್ಪಟಾವಿಗೆ ದುರಕೆಭರದೀ ॥೩॥

ರಾಗ ಭೈರವಿ ಏಕತಾಳ

ದಿಶಿಜಾಪತಿ ಬರುವದನೂ । ನರಪತಿಕಾಣುತಸಲಿಲವನೂ । ಅತಿಬೇಗನೆತಾಬಿಟ್ಟು । ನಿಜಸತಿಸಹವಸನವನುಟ್ಟು ॥೧॥ ಶರಚಾಪವ

ಕೈಕೊಂಡು । ನೃಪನೆಡೆಗೆದಾನವ ನಡೆತಂದೂ ॥ ಕಿರುನಗೆನಗುತರ ಸನನೂತಾಭರದಲಿನ್ನುಡಿಸಿದ ಖಳನೂ ॥

ರಾಗ ಶಂಕರಾಭರಣ ಮಟ್ಟತಾಳ.

ವಸುಮತೀಶ ಕೇಳುನಿನ್ನ ಪೆಸರದೇನುದಾವಪುರದಿ ವಸತಿಯಾವ ವಂಶದಾತನುಸುರುಯೆನ್ನೊಳು॥೧॥ ಅಸುರಕೇಳುಯದುಕುಲೇಂದ್ರ ನಸಹಕಾರ್ತವೀರ್ಯರಸೆಯೊಳೆನ್ನ ನಾಮ ನಿನ್ನ ಪೆಸರುನರುಹಸೂ ॥ ಧೀರಲಂಕೆಯರಸು ಶತ್ರುವಾರಮಥನಬ್ರಹ್ಮವಂಶ ಕೈರವಾಶ್ಯರೆಂಬ ರೆನ್ನ ಮೂರುಜಗದೊಳೂ ॥ ೨ ॥ ವೀರನಾದರೊಳಿತುಮನಕೆ ಭೂ ರಿತೋಷವಾಯ್ತು ಬಂದ ಕಾರಣಂಗಳನ್ನು ಪೇಳು ಭೋರನೆನ್ನೊ ಳೂ ॥ ೪ ॥ ಧುರವಬಯಸಿಬಂದೆನೀಗ ಧರಿಸುಚಾಪಶರವನಮ್ಮ ಧು ರದಪರಿಯನೋಡುತಿರಲಿ ತ್ರಿದಶರೆಲ್ಲರೂ ॥ ೫ ॥ ಹಿರಿದುನಮಗೆವೈ ರವಿಲ್ಲ ಬರಿದೆಯುದ್ಧಗೈಯಲೇಕೆ ತೆರಳುಗೃಹಕೆಂದುಭೂಪ ನೊರದ ಖಳನೊಳು ॥ ೬ ॥

ಭಾಮಿನಿ.

ಭೂಪನಾಡಿದ ನುಡಿಯಕೇಳ್ದು ಕೋಪದಿಂ। ದಶಾನನನು । ದಶಚಾಪವನು ಜೇಗೈದು ತನ್ನಯಬಲವನೀಕ್ಷಿಸಲೂ ॥ ತಾಪಸೇ ಶ್ವರಕೇಳು ಸಪ್ತದ್ವೀಪಪಾಲನಮೇಲೆಕವಿದುದು । ಭೂಪನಾರಾವಣ ನವಾರ್ಜುಲವೆಂಟುದಿಕ್ಕಿನಲೀ ॥ ೧ ॥

ವಾರ್ಧಿಕ್ಯ.

ಧರಣಿಪಂಪರಿಕಿಸುತಲಾ । ದೈತ್ಯಸುಭಟರಂ । ತ್ವರಿತದಿಂದೈ ನೂರುಚಾಪವಂಜೇಗೈದು ಕರಗಳೈನೂರತಲಿ ಬಾಣಪ್ರಯೋಗಮಂ ವಿರಚಿಸಲ್ಕಲ್ಪಾಂತದೀ ॥ ಸುರಿವಮಳೆಯೋ ಮೇಣದೇನೆನಲಾ ದೈ ತ್ಯಬಲಧರೆಗುರುಳಲಾಪ್ರಹಸ್ತಾದಿ ಮಂತ್ರಿಗಳೆಲ್ಲ ಪರಿಕಿಸುತ ಬಸ ವಳಿದರೇನೆಂಬೆ ನರ್ಜುನನಸಂಗರದಕೌತುಕವನೂ ॥ ೧ ॥

ಕಂದಪದ್ಯ.

ಸೇನೆಯುಮಡಿದುದಕಂಡಾ । ದಾನವರರಸಂ ಬಹುವಕ್ತ್ರಗಳಿಂ ॥ ಸಿಂಹಧ್ವಾನವನೆಸಗುತಬಂದಾ । ಮಾನವಪಾಲನರಥವತಡದುನೃಪನೊಳಿಂತೆಂದಂ ॥ ೧ ॥

ರಾಗ ಭೈರವಿ ಅಷ್ಟತಾಳ.

ಎಲವೊಭೂಪಾಲಕೇಳೊ । ನಮ್ಮಯಬಲುಬಲವನೀಸಮರದೊಳೊ । ಗೆಲಿದೆನೆನುತಹಿಗ್ಗಬೇಡ ಪರಿಕಿಸೆನ್ನ ಬಲುಹಸಂಗ್ರಾಮದೊಳೊ ॥ ೧ ॥ ವರವಿರೋಚಪುತ್ರಕರದೊಳೀಡೆ ತರಳಾಕ್ಷಿಯುರುನಿನ್ನನೂ ॥ ಭರದಿಂದಲೊಂದುತುತ್ತಿಗೊಮ್ಮೆ ಕುಣಿಸಿದಪರಿಯುನಾನರಿತಿಹೆನೂ ॥ ೨ ॥ ಅವನಿಪರೊಳಗೆನೀನು । ಕಟ್ಟವರೊಳುದ್ಭವಿಸಿದನುನಿನ್ನನೂ । ಭುವನೇಶನರಿಯಾದೆ ಮನ್ನಿಸುವರುರಾಜ । ನಿವಹಬಾಹಿರ್ಗೆಂದಾನೂ ॥ ೩ ॥ ಖಿಲಾಲಪುರಕುಲದಿ । ಪುಟ್ಟಿದೆನೀನುಶೀಲನಹುದುಜಗದೀ । ಹಲವುನಾಲಿಗೆಗಳಾತ ಗಳಹುವೆ ಬಾಲಕರಂದದಲೀ ॥೪॥ ವ್ಯಾಳವೇಣಿಯರಕೂಡೀ ! ಮಧ್ಯಾಹ್ನದಿವ್ರೀಡವಿಲ್ಲದೆಜಗದೀ ॥ ಕ್ರೀಡಿಪಭಂಡನೀಭಟನಲ್ಲವೆಂದಾನು ರೂಡಿಪಾಲಗೆಭರದೀ ॥ ೫ ॥ ವರವೇದವತಿಯುನೀನೂ । ಕೈದುಡುಕುತ್ತಧಿರಿಸಿದೆಚಾಪವನೂ ॥ ಧರೆಯುಲಿಬಹುಮಾನಯುತನೆಂಬುದೆಲ್ಲರು । ಅರಿತಿರುವರುನಿನ್ನನೂ ॥ ೬ ॥ ಭೂಮೀಶರೆಲ್ಲರನು । ಗೆಲಿದು ಸಾರ್ವಭೌಮನೆಂದೆನಿಸಿತಾನೂ। ಈಮಹಿಯೊಳುಶ್ರೇಷ್ಠನೆಂದೆಂಬ ಗರ್ವವ್ಯಾಮೋರ್ಹತಿಳಿಸುವೆನೂ ॥ ೭ ॥ ಈಶನಿರುವಗಿರಿಯಾ । ನೆಗಹೆಮತ್ತೆಆಶೆ । ಹರಾಭರ್ಟಿಯಾ । ನಾಶಮಾಡಿದಕೊಬ್ಬ ಮುರಿಯುವೆ ನೋಡೆನುತವನೀಶದೈತ್ಯನಾಜರಿದಾ ॥ ೮ ॥ ಬರಿಯಮಾತಾಡಿನೀನೂ । ಕಾಲವಕಳೆದರೆ ವೀರರೆಂಬರೇನೂ । ಕರದೊಳಗಾಯುಧವಿರೆ ತೋರಿಸಲಸ್ತ್ರದಬಿರಿಸೆನ್ನೊಳಗೆಂದನೂ ॥ ೯ ॥ ದುರುಳದಾನವನೆಕೇಳೊ ।

ತೋರ್ಪೆನುಶಸ್ತ್ರದಿರವನು ನಿಮಿಷತಾಳೂ॥ ಕರಸಿಕೋಟೇಕಾದ ಭಟರ ಬೆಂಬಲಕೆಂದು ಸುರಿದನಸ್ತ್ರಗಳನಂದೂ ॥ ೧೦ ॥

ಭಾಮಿನಿ.

ಧರಣಿಪಾಲಕ ದೈತ್ಯರೀರ್ವರು । ಪರಿಪರಿಯಶಸ್ತ್ರಾಸ್ತ್ರನಿಕರದಿ ಸುರನಿಕರಬೆರಗಾಗೆ ಕಾದಿದರೇನನುಸುರುವೆನೂ ॥ ಪುರಮಥನಕೈಟಭಗಜಾಸುರ ನರಹರಿಹಿರಣ್ಯಕರ ಸಂಗರಕೆರಡು ಮಡಿಯೆಂದುಲಿದು ಪೊಗಳಿತುನಭದೊಳಮರಗಣಾ ॥ ೧ ॥

ರಾಗ ಭೈರವಿ ಏಕತಾಳ.

ಸುರರಚ್ಚರಿಬಡುತಿರಲೂ । ಧುರಗಹಿಸಮನಾಗುತಾಬರಲೂ । ಅರಸನಾ ಅನಲಾಸ್ತ್ರದಲಿ । ದಶಶಿರನೆಚ್ಚನು ಮುನಿಸಿನಲೀ ॥ ೧ ॥ ಬರುವನಲಾಸ್ತ್ರವಕಂಡೂ । ನೃಪವರತಾನತಿಖತಿಗೊಂಡೂ । ವರುಣಾಸ್ತ್ರದೊಳದತರಿದಾ । ಖಳರೆರೆಯನಜರವ್ರತನುಡಿದಾ ॥ ೨ ॥ ಹರಕಮಲಜರಿತ್ತಿರುವ । ಶರವಿರಲೇತಕೆಹುಲುಶರವಾ ॥ ಸುರಿದಪೆಸುಮ್ಮನೆನೀನೂ। ತೊಡುಭರದೊಳು ದಿವ್ಯಾಸ್ತ್ರವನೂ ॥ ೩ ॥ ನರರೊಳಧಮನೀ ಕೇಳೊ । ಸರಸಿರುಹಭವನು ಮಮತೆಯೊಳೂ । ಕರುಣಿಸಿದಸ್ತ್ರದಾಪರಿಯಾ । ನೀಪರಿಕಿಸೆನುತ ಕೆಂಗರಿಯಾ ॥ ೪ ॥ ಕಿಡಿಸುರಿವಂಬನುತೆಗದೂ । ಪಡೆನಡುಗುವವೊಲ್ ಬೊಬ್ಬಿರಿದೂ । ಪಡಪಡಬಲ್ಲೆನೆಂದೆನುತಾ । ಖಳರೊಡೆಯನೆಚ್ಚನು ಕೇಳ್‌ಮುನಿಪಾ ॥ ೫ ॥ ನಳಿನಜಬಾಣಕೆನೃಪನೂ । ತಾಘುಳಿಲನೆಪ್ರತಿಶಸ್ತ್ರವನೂ ॥ ಸೆಳದೆಸೆಯಲಾಗಜಶರವೂ । ಬಲುಹಳಚಿತಂಬರನಡುಗಿದವೂ ॥ ೬ ॥

ವಾರ್ಧಿಕ್ಯ.

ಹರಕೊಟ್ಟಶಕ್ತಿಯಂ ದಾನವಂ ತಿರುಹಿಡಲ್ ಧರಣಿಪಂಬಹುಶರದೊಳಿಸಲಪಡಂ ಕೈಕೊಳದೆ ಉರವಕೀಲಿಸಲರ್ಧನಿಮಿಷಮೈಮರೆದಿರ್ದು ಘುಳಿಲನೆಚ್ಚಿತ್ತುಬಳಿಕಾ ॥ ಉರಿಯೊಗುವೆಕಂಗಳಿಂದೆದ್ದುದತ್ತಾ

ತ್ರಯಂ । ಕರುಣಿಸಿದ ದಿವ್ಯಾಸ್ತ್ರಮಂಕೈದುಡುಕಿಡಲ್ಧರೆಗುರಿಳಿದಂ ದೈತ್ಯನುರೆಕಾಷ್ಟದೋಳ್ ಮಗುಳೆ ಚೇತರಿಸಿಕೊಂಡೆದ್ದನೂ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ.

ಮಹಿಪಕೇಳ್ಸಂಗರದಿ ನೀನತಿಸಹಸಿಯಹು ದೀರೇಳುಲೋಕ ದೊಳಹಿವಿಭೂಷಣ ನಾಣೆ ಮೆಚ್ಚಿದೆ ನಹಹನಿನಗೇ ॥ ೧ ॥ ಪರಿಕಿಸಾದರೆನುತ್ತರಾವಣಧರಣಿಪಾಲನ ಕರದಚಾಪವತರಿದು ಕೆಡಹಿದನಿಳೆಗೆ ತಾನತಿತ್ವರಿತದಿಂದಾ ॥ ೨ ॥ ಘಡಎನುತಹೊಸಧನುವನವನಿಪತುಡುಕಿ ದೈತ್ಯನ ಹತ್ತುಕರದೊಳು । ಪಿಡಿದಧನುಗಳಕಡಿಯಲಾಘುಡುಘುಡಿಸುತಾ ॥ ೩ ॥ ಒಲಿದುಕುಂಬಿನಿಕೊಟ್ಟ ಶೂಲವನುಲಿವುತೆತ್ತಿನರೇಂದ್ರಗೆಂದನು ಗೆಲಿದೆನೆಂದೆನುತುಬ್ಬಬೇಡರಕಲೆಯೊಳೀಗಾ॥೪॥ ಕಾಲಪುರವನುತೋರ್ಪನೆತ್ತಿದ ಶೂಲವನೋಡಿದರೊಳಗೆನೀಕಾಲಗಾಣದೆಬದುಕಿದರೆ ನೀಭೂಪಾಲರೊಳಗೇ॥ ೫ ॥ ಘನಪರಾಕ್ರಮಿನೀನೆನುತಲಿಡೆಜನಪನತ್ರಿಜನಿತ್ತಶಸ್ತ್ರದಿ । ಘನತವಕದಿಂಕಡಿಯೆಸುರಜನಮನದೊಳುಲಿಯೇ ॥ ೬ ॥ ಬಾಹುಸಾವಿರಧರಧನುವಿಲಿವೋಹನಾಸ್ತ್ರವ ಹೂಡಿನುಡಿದನು ಕಾಲಹಪ್ರಿಯ ಕೇಳು ಶರವಿದ ಸಾಹಸದೊಳೂ ॥ ೭ ॥ ಗೆಲಿದರಗ್ಗಳನೀನೆನುತಲಿಡೆ ಮಲಗಿದನು ರಥದೊಳಗೆ ದಾನವಕುಲಶಿರೋಮಣಿ ನಿದ್ರೆಯೊಳು ಬಲಬೆದರಲೂ ॥ ೮ ॥

ವಾರ್ಧಿಕ್ಯ.

ದೊರೆರಥದಿ ಮಲಗೆಕಂಡಸುರಬಲಖಾತಿಯಿಂ ಭರದಿ ಭೂಪನಮುಸುಕಲವದಿರಂತರಿದು ಖಳನಿರುವ ಠಾವಿಗೆ ಬಂದು ಪಾಶದಿಂದವನ ಕರಗಳಿಪ್ಪತ್ತಬಿಗಿದೂ॥ ಮರಳಿ ಕವಿವಸುರರಂಬರಿಗೈದುದಾನವನಕರಿರಥಹಯಾಳಿಗಳ ಸೆರೆವಿಡಿದು ತನ್ನೆಡದ ಚರಣದಿಂ ದೈತ್ಯನಂಒದೆದು ಜಡಿದಾರ್ಭಟಿಸಿ ಜರವುತಿಂದೆಂದಖಳಗೇ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ.

ಸಿಕ್ಕಿದೆಯದೈತ್ಯರಾಯಾ । ನೀಘಕ್ಕನೆಬಂದೆನ್ನ ಕೈಯ್ಯಾ ॥
ರಕ್ಕಸರೊಳುಶ್ರೇಷ್ಠನೆನಗಾರು ಸರಿಯುಂಬ ಸೊಕ್ಕಿಂದಸೀಬಂದು
ಧುರವನೆಗಳಿಯಿಂದೂ ॥ ೧ ॥ ಸುರಪಾಲಘಟಶ್ರವುರೂ । ನಿನ್ನಕಿ
ರಿಯನುಜಾದಿ ದಾನವರೂ ॥ ಧುರದೊಳು ನಿನನ್ನನೋರ್ವನ ನೊ
ಪ್ಪುಗೊಟ್ಟೀಗತೆರಳಿದರೆಲ್ಲಿಗೆ ಕರೆಸವಡಿರಬೇಗಾ ॥ ೨ ॥

ವ್ಯಾಜಯುದ್ಧದಿಗೆಲಲಾನು ದೇವರಾಜರಂತಲ್ಲ ಕೇಳ್ನೀನು
ಆಜಿಯೊಳಗೆ ಮಾನವನೀಗಳುರೆ ಕಾವರಾಜಮುಖಿಗೆ ತೋರ್ಪೆಯಿ
ನ್ನೆಂತುವಕ್ತ್ರವಾ ॥ ೩ ॥ ಹರನಿರುವಾದ್ರಿಯನೆತ್ತಿ ದೇವವರನನುಬಿ
ಡದೆ ಬೆಂಬತ್ತಿಪರಿಭವಿಸಿದ ಸತ್ವವೆಲ್ಲತ್ರಿಜನಸುರ್ವಸಿರಿಯು ಸೆಳದಗ
ರ್ವವಿಂದಿಲ್ಲಿಪೋದುದು ॥ ೪ ॥ ಭೂತಳಾಮರವಂಶದೊಳಗೇ ।
ಪುಟ್ಟಿದಾತನೆಂದೆನುತನಾನಿನಗೇ। ಘಾತಿಸುವದಕಂಜಿದೆನು ನೃಪನಾ
ಗಿರ್ದಡೀತತಕ್ಷಣದೊಳು ಕೊಲುತಿರ್ದನಿನ್ನನೂ ॥ ೫ ॥

ವಾರ್ಧಿಕ್ಯ.

ದುರುಳಖಳನಂ ಯಿಂತು ಜರಿದಾನೃಪಾಲಕಂ । ಅರಮನೆಗೆ
ಬಂದು ದೈತ್ಯನಸೆರೆಯಿಡಲು ಪೌಲಸ್ತ್ಯನೂ॥ ಧರಣಿಪಗೆದೇಹಿಯುಂ
ದಾತನಂ ಬಿಡಿಸಿತಂದಿರದೆ ಲಂಕಾಪುರದಿ ಬಿಡಲಿತ್ತರಾವಣಂ ಹರುಷ
ದಿಂ ತನ್ನ ಸದನದೊಳಿರ್ದ ನಿತ್ತ ಮಾಹಿಷ್ಮತಿಯನೂ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ.

ಮುನಿನಾಥಕೇಳು ಮುಂಗಥೆಯಾನೊಂದಿವಸಾದಿ । ವನಜ
ಜನ್ಮನಿಯುಮುದದೀ। ಕನಕಪೀಠದೊಳೆಸದೀರ್ದನೇನೆಂಬೆನು ಘ
ನತರೈಶ್ವರ್ಯದಲೀ॥ ೧ ॥ ಧರಣಿಯಾಸುಮಾಯದೀಬಂದು ಭೂಮೀಶರ
ಹೊರಲಾರೆನೆಂದೆನುತಾ ॥ ಮೊರೆಯಿಡಲಾನುಡಿಗೇಳುತ್ತ ಶಕ್ರನ ಕರ
ದೆಂದನೊಂದುಮಾತಾ ॥ ೨ ॥ ಸುರಪಾಲಕೇಳುಭೂವನಿತೆ ಭೂಪಾ

ಲರಧರಿಸಲಾರೆನುಯನ್ನುತಾ ॥ ಮರುಗುವಳಿದಕೆನಿನ್ನುಕ್ರಿಯೇನದ
ನೀಗ ಳೊರೆಯನೆಶಚಿಯನಾಥ ॥ ೩ ॥ ಉಸುರಿದನೆಲೆಬೊಮ್ಮದೇವ
ಕೇಳಾವಿದಕೆಸಗುವದೇನದನೂ ॥ ಅಸುರಾರಿಗರುಹಿದರವಪರಿಹರಿಪಾ
ನು ವಸುಧೆಯಭಾರವನೂ ॥ ೪ ॥ ನಯನಗೋಚರ ನಹನಲ್ಲೆಮಗ
ಭುಜನಯನಯಿಂದಿನೊಳು ನಾವು ಭಯದಸಂಗತಿಯ ಬಿನ್ನೈಸು
ವದಿನ್ನೆಂತುಲಯವಿವರ್ಜಿತಗೆಂದನೂ ॥ ೫ ॥ ನೆನವರಹೃದಯದಿ
ಪರಿಪೂರ್ಣನಾಗಿಹ ಮನುಮಥಾರಿಗ್ಸಖನೂ। ಘನಭಕ್ತಿಯಿಂದೀ
ಗಸ್ತುತಿಸಿದರೊಲಿವನೂ ಮುನಿಜವಂದಿತಾನೂ ॥ ೬ ॥

ಭಾಮಿನಿ.

ಸುರಪನಾಡಿದನುಡಿಯಕೇಳುತ । ಸರಸಿಜೋದ್ಭವ ಭರದಿದೇ
ವರ ನೆರವಿಸಹನಡೆತಂದು· ಕ್ಷೀರಾಂಬುಧಿಯತೀರದಲೀ ॥ ಹರಿಯ
ಪಾದವಭಜಿಸೆ ಲಕ್ಷ್ಮಿಯರಸನದ ತಿಳಿದನಿಮಿಷಕೆ ಚರಿತ್ರಕರುಣಾಕಟಾ
ಕ್ಷದಿಂ ತೋರಿದನುಪುರವಾ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ.

ಸುರಪಮುಖ್ಯರುಕಂಡರಿದಿರಲಿ ತರುಣಿಪಾವಕ ಶಶಿಯತೇಜವ
ಜರಿದುರಾಜಿಸುತಿಹ ರಮೇಶನಪದದಸಿರಿಯಾ ॥ ೧ ॥ ಇರುವನೀಪಟ್ಟ
ದೊಳಚ್ಯುತದರುಸನವನವು ಗೀವನೆಂಡುಬ್ಬರದಹರಷದಿ ಪೊಕ್ಕರಾಪು
ರವಭರದೀ ॥ ೨ ॥ ಬಾಗಿಲೇಳನು ಕಳೆದುಸುರರು ಸರಾಗದಿಂಬರುತಿ
ರ್ದರಂದುವಿರಾಗಿಗಳ ದಾತಾರನಲ್ಲಿಗೆ ಬೇಗದಿಂದಾ ॥ ೩ ॥

ದ್ವಿಪದೆ.

ಸುರರಿಂತುಬರುವದನು ಅರಿತುಮುರಹರನೂ ॥ ಅರಿಯದನಂ
ತಿರ್ದನೇಸನುಸುರುವೆನೂ ॥ ೧ ॥ ವರಯೋಗನಿದ್ರೆಯಂ ಶೇಷ
ಶಯನದಲೀ ॥ ಕರುಣೆಮಲಗೇರ್ದಸಿರಿಕಾಲೊತ್ತುತಿರಲೊ ॥ ೨ ॥
ತರುಣಿಯರುಚಾಮರವ ಡಾಳಿಸುತಲಿರಲೂ॥ ಗರುಡಗಂಧರ್ವಾದಿಗಳು

ಪಾಡುತಿರಲೂ ॥ ೩ ॥ ಸುರತರುಣಿಯರು ಮುಂದೆ ದಿವ್ಯನಾಟ
ವನೂ ॥ ವಿರಚಿಸುತಲಿರ್ದರೊಡೆಯನಾರದರೂ ॥ ೪ ॥ ಕರದಿವೀಣೆ
ಯಧರಿಸಿ ತುಂಬುರರುಸಹಿತಾ ॥ ಹರಿಯಸ್ತೋಗಳುತ್ತಿರುವವೇಳೆಯೊಳ
ಗಿತ್ತಾ ॥ ೫ ॥ ಸರಸಿಜೋದ್ಭವಮುಖ್ಯರೈತಂದುಹರಿಯಾ ॥ ವರದಿ
ವ್ಯಮೂರ್ತಿಯನು ಕಂಡರಾಕಡೆಯಾ ॥ ೬ ॥

ಭಾಮಿನಿ.

ಯೋಗನಿದ್ರೆಯೊಳೆಸೆವಕರುಣಾಸಾಗರನ ಬಲವಂದು ಕ್ಷೀರ
ಶರಧಿನಾಗಶಯನ ಮುಕುಂದಜೀಯವಧಾನ ವೆಂದೆನಲೂ ॥ ಭೋಗ
ಮೂರು ತಿಸುರರುಬಂದುದನಾಗಳರಿದವನಂತೆ ವೈಮುರಿದಾಗುಳಿಸು
ತ್ತದ್ದೀಕ್ಷಿಸಿದ ನೆಡಬಲವನೊಲವಿನಲೀ ॥ ೧ ॥

ರಾಗ ಕೇದಾರಗೌಳ ಝಂಪೆತಾಳ.

ಮುಂದೆನಿಂದಿಹಸುರರನೂ । ಈಕ್ಷಿಸುತಯಿಂದಿರೆಯರಮಣ
ತಾನೂ । ಬಂದಹದನೇನುಯನುತಾ । ಬೆಸಗೊಂಡನಂದುಸುಮನ
ಸರುನಗುತಾ ॥ ೧ ॥ ಮುರಹರನಮಾತಕೇಳಿ । ಸುಮನಸರು ಮನದಿ
ಹರುಷವನುತಾಳಿ । ಹರಿಯಸಂಸ್ತುತಿಗೈದರೂ । ನಿನಗದನುಒರವೆ
ಶೌನಕನೆಕೇಳೂ॥ ೨ ॥ ಕಲ್ಪಾವಸಾನದೊಳುವಟಪತ್ರದತಲ್ಪದಲಿಮ
ಲಗಿದವಗೇ। ಅಲ್ಪಮತಿನುಡಿವುದೇನೂ। ಯನುತವಂಕಲ್ಪಿಹರಿಗೊಂ
ದಿಸಿದನೂ ॥೩॥ ಚರದೊಳಗೆಸ್ಥಾವರದಲೀ। ನೀಭರಿತನಿರುತಿರುವೆ ತವ
ಕೃಪೆಯಲೀ॥ ಯಿರುತಿಹದುಲೋಕವೆನುತಾ। ವಿಷ್ಣುಪದಕೆರಗಿದನುಸು
ರಪನಗುತಾ॥ ಪರಿಪರಿಯರೂಪಧರಿಸೀ। ಭಕ್ತಜನರೊರವಭೀಷ್ಟಗಳಸ
ಲಿಸೀ ಪಿರಿದುಪೂಜೆಯಗೊಂಬನೂನೀನೆನುತೆ ಹರಿಗೆರಗಿವಂದಿಸಿದ
ನೂ॥೫॥ ದುಷ್ಟರನುಶಿರವನರಿದೂ ಧರೆಯೊಳಿಹಶಿಷ್ಟಜನರಿಗೆಧರೆಯೊ
ಳೂ॥ ಯಿಷ್ಟವನುಪಾಲಿಸುವನೂ । ನಿನ್ನೆನ್ನ ತುಷ್ಟಿಸುವದೆಂದಯುಮ
ನೂ॥ ಹರಿಹರಬ್ರಹ್ಮನೆನುವಾ।ನಾಮವನುಧರಿಸಿಪ್ರೇಮದಲಿಜಗವಾ॥

ಪೊರೆಪಪರಮಾತ್ಮನೀನು। ಯೆನುತಪದಕೆರಗಿದನುಕ್ರವ್ಯಾದನೂ ॥೭॥
ಬಣಗಸುರನರರೆನ್ನುವ ಗೊಂಬೆಗಳಿಗೆಣೆಮಾಡಿ ಘನಸೂತ್ರವಾ ॥
ಕುಣಿಸುವ ನೀನೆನ್ನುತಾ । ಶ್ರೀ ಪ್ರಿಯಗೆ ಮಣಿದನಾವರುಣನಗು
ತಾ॥ ೮ ॥ ಹೇಮಾಂಬಕಾದ್ಯಸುರರಾ । ಸಂಹರಿಸಿನೀಮುದದಿ ಪೊರ
ದೆಸುರರಾ ॥ ಶ್ರೀಮನೋಹರ ಯನ್ನನೂ । ಸಲಹೆನುತಲಾ ಮರುತ
ವಂದಿಸಿದನೂ ॥ ೯ ॥ ಪರಮೇಶಮಿತ್ರನಿನ್ನಪೊಗಳುವರೆ ಉರಗೇಂ
ದ್ರಗರಿದುಯನ್ನಾ । ಕರುಣದಿಂಪೊರೆಯನ್ನುತಾ । ಹರಿಚರಣಕೆರಗಿ
ದನು ಧನಪನಗುತಾ ॥ ೧೦ ॥

ರಾಗ ಕೇದಾರಗೌಳ ಅಷ್ಟತಾಳ.

ಯಿಂತಾತನ್ನನುನುತಿಸುವ ಸುಮನಸರಿಗೆ ಕಂತುಜನಕನಗು
ತಾ॥ ೧ ॥ ಧರೆಯಭಾರವುಕಡುಹೆಚ್ಚಿತುದೇವಕೇಳ್ ತ್ವರಿತದೊಳದನು
ನೀನೂ । ಪರಿಹಾರಗೈದೆಮ್ಮ ಪೊರೆಯಬೇಕೆನೆವಿಷ್ಣುಸುರಪನೊಳಿಂ
ತೆಂದನೂ ॥ ೨ ॥ ಮಧುವೆಂಬದಾನವ ಕೃತವೀರ್ಯಭೂಪನ ಸುದತಿ
ಯೊಳುದಿಸಿದನೂ ॥ ಮದಮುಖರಾಗಿ ಹರವಸದಿನಿಂದ ಭೂಪರಸುದ
ವೆನಾತನನೆಂದನೂ ॥ ೩ ॥ ಧನುಜಮರ್ಧನ ಪೇಳದೇನುಕಾರಣ
ದಿಂದವನಿತೆರಾಕಾವತಿಗೇ । ಜನಿಸಿದನಾಖಳನೆನಲೆಂದನಸುರಾರಿ ।
ಘನವಾಹನಗೆಮುದದೀ ॥ ೪ ॥ ಇವನಸ್ತ್ರಮಯಕಾಲದೊಳಗೊಂ
ದುದಿನಭೂಪವನಿತೆಯಕೂಡಿದೊಂದಿನಿತುಕಾರಣದಿಂದಕರವಿಲ್ಲದುದಿ
ಸಿದ ಮನುಜಪಾಲಕಗೆಂದಾನೂ ॥ ೫ ॥ ಕರವೇತಕಿಲ್ಲವಾದುದು
ಭೂಪಾಲನ ತರಳನಿಗದನಮಗೆ ಒರದೆಮ್ಮ ಮನಸಿನಸಂದೇಹಗಳಪ
ರಿಹರಿಸೆಂದನಾಹರಿಗೆ ॥ ೬ ॥ ಧರಣಿಯಮೊರನೊರ್ವ ಹರನಿಗರ್ಪಿ
ಸುತಿಪ್ಪಶರಜಲಕಳಕಳಲೂ ॥ ಕರವಿಲ್ಲದಾಗಲೀ । ಕೊಳಸಕೊಲ್ಲಲಿ
ಹರಿಯುಂದುಕೋಪದೊಳೂ ॥ ೭ ॥ ಪಿರಿದುಶಾಪವಿತ್ತಕಾರಣಬಾಲಗೆ।
ಕರವಿಲ್ಲದಾಯ್ತೆನಲು ॥ ಸುರನಾಥಕೇಳ್ದ ಸಾವಿರಬಾಹುಗಳಮತ್ತೆ

ತರಳಗಿತ್ತವರುದಾರೂ॥೮॥ ಯನ್ನವಂಶದಿಂದುತ್ಪನ್ನನಾಗಿಹ ಮುನಿ
ರನ್ನ ದತ್ತಾತ್ರೇಯನೂ ॥ ಮನ್ನಿಸಿಬಹುಕರವಿತ್ತನು ಪ್ರಸನ್ನಭಾವ
ದೊಳಿಂದನೂ ॥೯॥ ಪುರುಹುತಕೇಳ್ ಭೃಗುವಂಶದಿಜನಿಸಿಸಾಪರ
ಶುರಾಮಾಖ್ಯೆಯನೂ ॥ ಧರಿಸಿಪೃಥ್ವೀಶರತರಿವೆನೆ ಮನದೊಳುಧರಿಸಿ
ಧೈರ್ಯವನೆಂದನೂ ॥೧೦॥

ಭಾಮಿನಿ ॥ ಹರಿಯಮಾತನುಕೇಳಿ ಕೋಪದಿಸರಸಿಜೋದ್ಭವ
ಮುಖವಿಬುಧರು। ಚರಣಕಮಲಕೆಮಣಿಯುಲವರನು ನೆಗಹಿಮುರಹರ
ನೂ॥ ಧರಣಿಸುರರೊಳುಜನಿಸುವಂದದಿಹರಗೆ ಬಿನ್ನಹವಮಾಡಿನೀವೆಂ
ದೊರೆದುಅಂತರ್ಧಾನವಾದನು ಸುರರುಬೆರಗಾಗೇ ॥೧॥

ದ್ವಿಪದೆ ॥ ಹರಿಯನೇಮವನಾಂತು ಸುಮನಸರುಮನದೀ ।
ಸ್ಮರವಿನಾಶನ ಪದವಕಾಂಬತವಕದಲಿ ॥೧॥ ಹರನಸಿರಿಚರಣವನುಅರ
ಸುತ್ತೈತರಲೂ ॥ ಮೆರವರಜತಾಚಲವ ಕಂಡರಿದಿರಿನೊಳೂ ॥೨॥ ರಜ
ತಶೈಲವನು ಬಲವಂದುಸುಮನಸರೂ। ಅಜನಕಾಂಬುತ್ಸವದಿ ಗಿರಿ
ಯನೇರಿದರೂ ॥೩॥ ದ್ವಿಜವರ್ಯಕೇಳ್ ಪುರದಬಾಗಿಲಿಗೆಬಂದೂ ।
ಅಜಮುಖ್ಯರಾಗನಂದೀಶ್ವರನಿಗಂದೂ॥೪॥ ಬಿನ್ನವಿಸಲಪನುಶೀಘ್ರ
ದಲಿನಡೆತಂದೂ । ಪನ್ನಗಾಭರಣಗೆಂದನುಸುರರುಬಂದೂ ॥೫॥
ನಿನ್ನಕಾಂಬುವದಕ್ಕೆ ಬಾಗಿಲೊಳಗಿಹರೂ ॥ ಸನ್ನಿಧಿಗೆನಡೆತರಲಿಯಂ
ದಕರುಣಾಳೂ ॥ ಸರಸಿಜೋದ್ಭವ ಮುಖ್ಯಸುರರುಬಾಗಿಲನೂ । ವರ
ನಂದಿಕೇಶಾಜ್ಞೆಯಂ ಕಳೆದುಹರನೂ ॥೭॥ ತರುಣಿಪಾರ್ವತಿಸಹಿತಸ
ಭೆಯುಲೆಸದಿರುವಾ । ಪರಮವಿಭವವನೋಡಿ ತೂಗಿದರುಶಿರವಾ ॥೮॥

ಭಾಮಿನಿ ॥ ಹರಮುಕುಂದ ಪ್ರಿಯಸುಧಾಕುಲ ತರಣಿಪಾವಕ
ನೇತ್ರರಂಕರಗರಳಕಂಧರ ಶುಭ್ರವರ್ಣಮಹೇಶದೇವೇಶ ॥ ಸ್ಮರವಿ
ನಾಶನಭಕ್ತಪೋಷಣ ಉರಗರಾಜಾಭರಣಪಾವನಚರಿತ ಜಯಜಯಯೆ
ನುತಪಾದಕೆ ಮಣಿದುದಮರಗಣಾ ॥೧॥

ರಾಗ ಸೌರಾಷ್ಟ್ರ ಅಷ್ಟತಾಳ

ಚರಣದೊಳೆರಗಿದಸುರರನ್ನು ಹರಕರುಣದೊಳೆತ್ತುತೆಂದನೂ॥ ಸುರರೆಲ್ಲರೊಂದಾಗಿಬಂದೀರಿಕಾರ್ಯವಿರುವದೇನದರನೀವ್ರುಪೇಳಿರಿ ॥ ಸುರಪಾಲನೆಂದಕೇಳ್ ಚಿನ್ಮಯ ನಮ್ಮ ಮನದೊಳಗಿಹುದನೀನರಿಯೆಯೂ। ಧರೆಯಭಾರವ್ರುಹೆಚ್ಚಿತದರನ್ನು ಬೇಗಾ। ಪರಿಹಾರಗೈಯಬೇಕೆಂದಾನೂ॥೨॥ ಹರಿಗೆವೊರೆಯನಿಟ್ಟರಾತನು। ಬೇಗತರಿವಾನು ಭೂಮಿಪಾಲಕರನ್ನು॥ಮರುಗುವದ್ಯಾತಕೆಸುಮ್ಮನೇ। ಪೋಗಿಅರುಹಿರಮೇಶಗೆ ಘಮ್ಮನೇ॥ ಸ್ಮರವೈರಿನೀನರಿಯುವದೇನುದಂತಿವರದಾಗೆ ಬಿನ್ನವಿಸಿದೆನಾವ್ರು। ಪುರವಿನಾಶನಿಗೊಂದುವಾತನು। ಅರುಹಿರೆಂದನು ಪದ್ಮನೇತ್ರನೂ॥೪॥ ಬಲವೈರಿಕೇಳುಶ್ರೀನಿವಾಸನೂ। ನಿಮ್ಮೊಳೊಲಿದೇನಬೆಸಸಿದನದರನ್ನೂ॥ ನಲವಿಂದಲಾಚರಿಸುವೆ ನಾನೂಪೇಳುಬಲವೈರಿಯಪವಾದವನೀನೂ ॥೫॥ ಹರನೀನುಜಮದಗ್ನಿನಾವಮಾದಿ। ನಿನ್ನತರುಣಿರೇಣುಕೆಯೆಂಬಪೆಸರಲ್ಲೀ॥ ಧರಣಿಯೊಳುದಿಸೆ ತಾರೊಡಲನೂ ನಿಮ್ಮ ತರಳನೆನಿಸಿಕೊಳ್ವೆನೃಪರನ್ನೂ ॥೬॥

ಭಾಮಿನಿ ॥ ಅನಿಮಿಹರ ವಾಕ್ಯವನುಕೇಳ್ದಾ। ಚಿನುಮಯನು ನಗುತೆಂದನಿಮ್ಮಯ ಮನದಬಯಕೆಯ ಸಲಿಸಿಜನಿಸುವೆವಾವ್ರು ಭೂಮಿಯಲೀ॥ ವನಜಲೋಚನನೆಂದವೊಲ್ ನೀವ್ರು ಮನೆಗೆತೆರಳುವದೆಂದುನೇಮಿಸೆಅನಿಲನೇತ್ರನಿಗೆರಗಿ ಲೇಕರುಗವಿಸಿದರುಗೃಹಕೇ ॥೧॥

ವಾರ್ಧಿಕ್ಯಾ॥ ಒರವೆಮುಂಗಥೆಯ ಕೇಳ್ ಚಂದ್ರಂಗೆಬುಧಬುಧಗೆತರುಣನಾದಂ। ಪುರೂರವನವಗೆ ವಿಜಯನೆಂಬುರು ಪರಾಕ್ರಮಿಯಾಗಿಜಯಸಿದಂ। ಮುಂದವನಸುತಿಶಿರೋಮಣಿರಾಣಿಗೇ ॥ ವರಸುಯತ್ನಾಖ್ಯನವಗವಗವನಾತಂಗೆ। ಧರಣಿಪಾಲಕನಶ್ವಯೋಜಕುಂಕುಶನವನತರಳನಾತಗೆ ಗಾಧಿಯೆಂಬ ನಂದನನುದಿಸಿ ವಿಖ್ಯಾತನಾಗೀದರ್ನೂ॥೧॥ ತರಳೆಯೋರ್ವಳು ಸತ್ಯವತಿಯೆಂಬುವಳ್ ಭೂಪ। ವರ

ಗುದಿಸಲಾಗವಳನಾ ರುಚೀಕಾಖ್ಯಮುನಿ । ಗುರುತರೋತ್ಸವದಿಂದ ಪರಿಣಯಂಗೈದಿತ್ತನಾಭೂಪನೊಂದುದಿವಸಾ ॥ ಧರಣಿಯುಮರತ್ರೆಷ್ಠಸುತಶೇಷವಮಂ ತನ್ನ ತರುಣಿಯುಂಕರದಿತ್ತು ಪೇಳ್ವನೊಂದಿದುನಿನಗೆ । ಸರಸಿಜಾಂಬಕಿ ನಿನ್ನಮಾತೆಗೊಂದಿದುಮೆಲಲ್ ನಿಮಗಣುಗರ ಹುರೆಂದನೂ ॥೨॥ ಕೇಳ್ದು ಳಾಪತಿವಾಕ್ಯಮಂ ಮನದಿಹರುಷವಮಂ । ತಾಳ್ದು ಳಂಗನೆತನ್ನ ತವರ್ಮನೆಗೆ ಪೋಪೆನೆಂದಾಳ್ದನಪ್ಪಣೆಗೊಂಡು ಜನನಿಯಲ್ಲಿಗೆಬಂದು ಸರ್ವವೃತ್ತಾಂತಗಳನೂ॥ ಪೇಳ್ದು ವ್ಯತ್ಯಾಸದಿಂಹುತಶೇಷವಮಂ । ಮೆಲಲ್ತಾಳ್ದರೀರ್ವರು ಗರ್ಭವಮಂ । ಬಳಿಕಲಾಭೂಮಿಯೊಳಗುದಿಸಿದನುವಿಶ್ವಾಮಿತ್ರ ಜಮದಗ್ನಿ ಸತ್ಯವತಿಯಿಂದೊಗೆದನೂ ॥೩॥

ಕಂದಪದ್ಯ ॥ ತಪಸಿನಬಲದಿಂದಾದ್ವಿಜ ನೃಪತನಮಂತ್ಯಜಿಸಿ। ಬುಧವೃಂದದಿಸೇರ್ದಂ ತಪಸಿಯೊಕೇಳ್ ಜಮದಗ್ನಿಯು ವಿಪಿನದಿಪೆತ್ತವನಸೇವೆಯೊಳಗಿರುತಿರ್ದಂ ॥೧॥

ರಾಗ ಸೌರಾಷ್ಟ್ರ ತ್ರಿಪುಡೆತಾಳ

ಧರಣಿಪತಿರೇಣುಕನಯೋಧ್ಯಾಪುರದಿ ರಾಜ್ಯವನಾಳುತಿರ್ದನು ಉರುತರೈಶ್ವರ್ಯದಲಿ, ಶಕ್ರಗೆ ಸರಿಸನೆನಿಸೀ ॥೧॥ ಕ್ಷಿತಿಕುಲೋತ್ತಮನೊಂದುದಿನ ವರಪುತ್ರಕಾಮೇಷ್ಟಿಯನು ವಿರಚಿಸಲ್ಪುತ್ರಿರೇಣುಕೆಯುಂಬಳಿಗೊಗೆದಳುಮಿತ್ರಹರಗೇ ॥೨॥ ಸುತೆಸಹಿತಭೂನಾಥನತಿಮುದಯುತನೆನಿಸಿ ರಾಜಸುತಲಿರಲಾಕ್ಷಿತಿಯೊಳಿಹ ತೀರ್ಥಗಳವಿಹಾಯುತಪಿತನುಸಹಿತಾ ॥೩॥ ಸತ್ಯವತಿಯಾತ್ಮಜನು ನೃಪಕುಲಸತ್ತಮನಪುರವರವನೋಳ್ಪೆನೆನುತ್ತ ನಡೆತಂದಲರಸನದ ಠಾಣುತ್ತಮುದದೀ ॥೪॥

ರಾಗ ಕೇದಾರ ಗೌಳ ಝಂಪೆತಾಳ

ಧಾರುಣಿಪ ದ್ವಿಜವರ್ಯನಾ। ಕರೆತಂದುಭೂರಿತೋಷದೊಳವದಿರಾ॥ ಚಾರುವಿಷ್ಟರವೆರಸೀ। ಬೆಸಗೊಂಡಭೋರಸನವದಿರಿಗೆ ನಮಿಸೀ॥

ಬೊಮ್ಮಚಾರೀಶ್ರೇಷ್ಟನೂನೀನೀಗನಮ್ಮಪುರಕ್ಕೈದುದೇನೂ ॥ ನಿಮ್ಮ
ಪೇಸರೇನೀತನೂ । ಸಮ್ಮಂದವೇನಲೆಂದನೂ ॥೨॥ ಜನಪಕೇಳೆ
ನ್ನಪೆಸರು। ಜಮದಗ್ನಿಯನುವರೀ ಧಾರುಣಿಯೊಳೂ । ಘನತಪೋ
ಧನನೀತನೂ । ಮಜ್ಜನಕನೆನೆ ಭೂಪಮಗುಳೆಂದನೂ ॥೩॥ ಎಲ್ಲಿಂ
ದಬಂದಿರಿನ್ನು। ನೀವ್‌ಮುಂದಕೆಲ್ಲಿಗೈದುವಿರದನೂ॥ ಸೊಲ್ಲಿಪುದು
ನಿಮ್ಮ ಪಾದದರುಶನದಿಎಲ್ಲರಘ ಹರಿದುದೀಗಾ ॥೪॥ ಧರೆಯಲಿಹ
ತೀರ್ಥಗಳನೂ । ಸೇವಿಸುತ ತಿರುಗಿಮನೆಗೈದುವನೂ ॥ ಅರಸನಕೇ
ಳ್‌ದರ್ಶನವನೂ ॥ ವಿರಚಿಸಲುಭರದಿಂದಬಂದೆನಾನೂ ॥೫॥ ಸುತೆ
ಯೊರ್ವಳಿರುವಳ್। ನಾನಾವಕ್ಷಿತಿಪನಿಗೆಕೊಡಲೆಂಬುದ ಯತಿಪನೀ
ಪೇಳ್ವುದೆನಲೂ । ಸತ್ಯವತಿಪತಿಪೇಳ್ದನಾನೃಪನೊಳೂ ॥೬॥ ಕರಸೆ
ಲ್ಲಭೂಮಿಪರನು । ನೀಬೇಗವಿರಚಿಸುಸ್ವಯಂವರವನೂ ॥ ವರಿಸಿಕೊ
ಳಲರಸಕೇಳೆನಲೆಂದನೂ ॥೭॥

ಭಾಮಿನಿ ॥ ಕರುಣನಿಧಿಕೇಳ್ ಸುತೆಯಮದುವೆಗೆಕರಸುವೆನು
ತವಪುತ್ರಸಹನೀಭರದಿನಮ್ಮಾಲಯಕೆಬಿಜಯಂಗೈಯಬೇಕೆಂದಾ॥ತ
ರಳಿದನುಮುನಿಯತ್ತಲಿತ್ತಲು ಧರಣಿಪಾಲಕಮುದದಿತನ್ನಯ ತರಳನೆ
ನಿಸುವ ಶೂರಸೇನನಕರಸುತಿಂತೆಂದಾ ॥೧॥

ರಾಗ ಕಾಂಬೋಧಿ ಝಂಪೆತಾಳ

ತರಳ ನಿನ್ನನುಜೆಗಿನ್ನೆರಡು ದಿನದಲಿ ಸ್ವಯಂವರವವಿರಚಿಸಬೇ
ಕುಪಟ್ಟಣವಾ ॥ ಭರದಿಶೃಂಗರಗೈಸುವಂತೆ ಮಂತ್ರಿಗೆಪೇಳುಬರೆಸು
ಭೂಪರಿಗೆ ಲೇಖನವಾ ॥೧॥ ಮುನಿಗಳಾಶ್ರಮಕೆ ದೂತರಕಳುಹುಬೇ
ಗೆನಲು ಜನಕನುಕ್ತಿಯಕೇಳಿನಗುತಾ । ಘನತವಕದಿಂಮಂತ್ರಿಯನು
ಕರಸುತಿಂತೆಂದ ಜನಪತನ್ನೊಡನೆಂದಮಾತಾ ॥೨॥ ವರಮಂತ್ರಿಕೇ
ಳ್ಪುರವಶೃಂಗರಿಸುಪತ್ರವನು ಬರಸುಭೂಮೀಶ್ವರರಪುರಕೇ ॥ ಚರರ
ಕಳುಹಿಸುಬೇಗಕರಸು ಭೂಸುರಜನರತರಿಸುಬೇಕಾದವಸ್ತುಗಳಾ ॥೩॥

ಎನೆಮಂತ್ರಿಕೇಳುತದರೊಡನೆ ವಿರಚಿಸಲೊಡನೆಜನಪರತಿಸಂತಸದಿ ಪೊರಟು ॥ ವಿನಯದಿಂಸಾಕೇತಪುರಕೆ ಬಂದರದೇನನೆನುವೆತಾನರು ಪಕೇಳೂ ॥೪॥ ಚವನಗುಕುವೂರನುತ್ಸವದಿಂದರುಷಿನಿವಕುವೆ ಕುವರ ಸಹಬರಲದನುಕಂಡೂ ॥೫॥

ಭಾಮಿನಿ ॥ ಮರುದಿವಸವಾಸಭೆಯೊಳೆಲ್ಲರು ಮೆರವವಿಸ್ತಾರ ದಲ್ಲಿಕುಳ್ಳಿರೆಸ್ಮರಹರಾದ್ಯ ನಿಮಿಷರುಬರಲವದಿರನು ಮನ್ನಿಸುತಾ ॥ ಧರಣಿಪತಿಯುವತಿಯರಕರೆದಾ ತರಳೆಯನುಶೃಂಗರಿಸಿತಹುದೆನೆ ಅರಸ ನಾಜ್ಞೆಯಲೋಕವೀರೆಯತಂದರಾಸಭೇಗೆ ॥೧॥

ವಾರ್ಧಿಕ್ಯಾ॥ ವನಿತೆಯರುನೃಪರೆಡೆಗೆ ರೇಣುಕೆಯಕರತರಲ್ಜ ನಕನಡಿಗಾಬಾಲೆಮಣಿಯುಲೆತ್ತುತೆಂದಾ ॥ ತನುಜೆಕೇಳೀಜನಪವ್ರಾತ ದೊಳ್ನಿನಗಾರುಪತಿಗಳಹರವರನಿಂದೂ ॥ ವಿನಯದಿಂವರಿಸೆಂದೆನು ತಪುಷ್ಪಮಾಲೆಯಂ । ವಸಧಿವಾಸಾಧೀಶನಿತ್ತಣುಗಗೆಂದ ನೀವುನು ಜೀಶರಂಗುತೆಗೆವಿವರದಿಂ ತೋರೆನಲ್ಕೆವಮುದದಲನುಜೆಸಹಿತಾ ॥೧॥

ಕಂದಪದ್ಯ ॥ ಭರದಿಂನಡೆತಂದಾನೃಪವರಗಡಣದಮಧ್ಯದಂ ಡಿಗೆಯೊಳ್ ಸಹಜೆಯುಕರತಂದಾಕೆಗೆ ಪೇಳ್ದುಧರಣಿಪಸುತನಗುತ ಪೇ ಳ್ದಮೃದುನುಡಿಯಿಂದಂ ॥೧॥

ರಾಗ ಕೇದಾರ ಗೌಳ ಝುಂಪೆತಾಳ

ತರಳಾಕ್ಷಿಕೇಳೆ ನಿನಗೆತೋರಿಸುವೆಧರಣೇಶರವದಿರೊಳಗೇ । ಅರಸಾದಹರವರನೂ । ನೀಸೀಗಹರುಷದಿಂ ವರಿಸೆಂದನೂ ॥೧॥ ಭೂಮಿಶ್ವರರಪುರವನೂ । ಮೇಣವರನಾಮವೇನೆಂಬುದರನೂ ॥ ನೇ ಮದಿಂಪೇಳುನೀನೂ । ವರಿಸಿದಪೆನಾಮನಕೆಬಂದವರನೂ ॥೨॥ ಪ ರಮೇಶನೀತಜಗಕೇ । ವರನಹನೆಪೇಳ್ದುದೆನಲೂ ॥ ಸಹಭವಗೆನ್ನ ದಳತಿಸಂಭ್ರಮದೊಳು ॥೩॥ ತನುವಿನದಾರ್ಢಂಶವನ್ನು । ಶಳಮರ ಳು ವನಿತೆಕೇಳ್ಮೃದೇವನ್ನೂ ॥ ದನುಜಹರಪುತ್ರಗಿತ್ತಾ ನಿಮಗಿದಿಹ

ವನಿತೆಯರದ್ಯಾಕೆಭ್ರಾಂತ ॥೪॥ ಯಿತ್ತನೋಡಬಲೆನೀನೂ । ನಿರ್ಜರರವೊತ್ತಿಕಿವನಧಿರಾಜನೂ ॥ ಉತ್ತಮಾನುನಿನಗೀತನು । ಪತಿಯುಹನೆಚಿತ್ರದಲಿಗ್ರಹಿಸೆಂದನೂ ॥೫॥ ಜಾರತರದಿಂದೀತನು । ತಾಳಿದನು ಭೂರಿನಯಾಸವನುಮೋಣೂ । ಭೂರಿದೈತ್ಯರಕಾಣಲು । ಗಿರಿಗುಹೆಯ ಸೇರಿದವನೀತಕೇಳೂ ॥೬॥ ಬಳಿಕಾಳಿದಸುಮಾನಸರನು ॥ ತೋರಿಸಲು ನಳಿನಲೋಚನೆಯುವರನೂ ॥ ಎಣಿಕೆಗೈಯುದಿರ್ಕಾಣುತಾ । ತೋರಿದನುಯಿಳೆಗಧಿಪರನ್ನು ನಗುತಾ ॥೭॥ ಕೃತವೀರ್ಯಪುತ್ರನಿವನೂ । ಮೂಲೋಕಪಶಿಯುಖಿಲಶಿರಿವಂತನೂ ॥೮॥ ಅತಿಬಲಾನ್ವಿತನಿಳೆಯೊಳೂ । ನೀನಗೀತ ಪತಿಯಪ್ಪನೇಸಹೇಳೂ ಕರಗಳೀತಗೆಸಾವಿರಾ । ಪರಿಕಿಸಲುಶಿರಬಂದುಭೂಮಿಾಶರ । ನೆರವಿಬಾಹಿರನೀತನೂ । ಯನಗೆಂತು ಅರಸನಹನೆನಲೆಂದನೂ ॥೯॥ ಧರಣಿವಲಯದಭೂಪರೂ ॥ ನೆರದಿಹರು ಪರಿಕಿಸೆಲ್ಲರನಿವದಿರಾ ॥ ಅರಸರ್ಯಾರಹರವದಿರಾ । ತೋರೆನಲು ಒರದಳಣ್ಣನಿಗುತ್ತರಾ॥೧೦॥ ಅರಸರೆಲ್ಲರನುನಾನೊ। ನೋಡಿದೆನು ಹರಿಸುದಂಡಿಗೆಯನೀನೂ । ಭರದಿಂದಮುಂದಕೆನಲೂ । ನಗುತನುಜೆಗೊರದನತಿಸಂಭ್ರಮದೊಳೂ॥ ೧೧॥ ಪರಿಕಿಸಾದರೆರುಷಿಗಳಾ । ಸಭೆಯಮುಂದಿರುವನಿವನತ್ರಿತರಳೆ ವರವ್ಯಾಸರುಜಯಾತನೂ । ಭೃಗುಪೌತ್ರತರುಣಜಮದಗ್ನಿಯಿವನೂ ॥೨॥

ಭಾಮಿನಿ ॥ ಪರಿಕಿಸುತ ಜಮದಗ್ನಿಮುನಿಪನತರುಣಿತನ್ನಯ ಮನಮೊಳೆಂದಳು । ಸ್ಮರಾಭನುಎನಗೀತರಮಣನೆ ಹೊರತುಬೇರುಳಿದಾ ॥ ಸುರನರೋರುಗರೆಲ್ಲರೆನ್ನಯ ಹಿರಿಯಕಿರಿಯರ ತೆರದಿತೋಪರು । ಪರನುವಿಸ್ಮಯವೆನುತವಿಳಿದಳು ಭರದಿದಂಡಿಗೆಯಾ ॥೧॥

ವಾರ್ಧಿಕ್ಯಾ ॥ ಸುಮನಸುದವಾಲೆಯಂ ರೇಣುಕೆಯುಕೋಪದಿಂ । ಜಮದಗ್ನಿಗಿಕ್ಕಲದ ಕಾಣುತ್ತಹರುಷದಿಂ । ಸುಮನಸರುಪುಷ್ಪವೃಷ್ಟಿಯ ಸುರಿದರೇನೆಂಬೆನಂಗರಕ್ಷಣೆಗೆಚರರಾ ॥ ಕ್ಷಮೆಯರಸ

ನಾಜ್ಞೆಯಿಂಬಳಸಿದಮುನಿಪನಂ । ಉಮೆಯರಸಮುಖ್ಯರಾಲಯ
ಕೈದಿರ್ದರಾರಮಣರತಿರೋಷಿಸುತಮ್ಮಸಗಿದರು ಕೃತವೀರ್ಯಭೂಪಾ
ಲನಿಂತೆಂದನೂ ||೧||

ರಾಗ ಸೌರಾಷ್ಟ್ರ ತ್ರಿವುಡೆತಾಳ

ನೋಡಿದರೆ ಭೂಮಿಪರುರೇಣುಕ ನೂಡಿದವಮಾನವನು ಮಹಿಪರ
ಕೂಡಿಕೊಟ್ಟನು ತನ್ನ ಸುತೆಯನುಕಾಡಬಾಧಗೇ ||೧|| ಮಾನನಿಮಗಿ
ಗೆನೃಪನನಿರ್ಜರಮಾನುನಿಯರೊಳುಕೂಡಿ ಮೇಣಭಿಮಾನನಿಮಗಿಲ್ಲ
ದಿರೆ । ರೇಣುಕಸೂನುವಿಂಗೇ । ತರುಣಿಯರಬಿಳುವಳಿಯಕೊಡಿರೆ ನಲ
ರಸೊರದಲಾಲಿಸುತಕೋಪದಿ ವರದರಾ ಮಾಹಿಷ್ಮತೀಪುರದರಸನೊಡ
ನೇ ||೩|| ಖಾತಿಯಾಕೆಲೆಜೀಯತ್ರಿದಶಮಾತ್ರದೊಳು ರೇಣುಕನಕೂಡಿ
ಸಿಈತರುಣಿಯನುತವವಿಲಾಸಿನಿಜಾತದೊಳಗೇ ||೪|| ಸೇರಿಸುವೆಯಂ
ದೆನುತ ಭೂಮಿಪರಿವಾರವಾ ಸಾಕೇತಪುರವನು ಸೂರೆಗಾರಂಜಿಸಲು
ಕಾಣುತಚಾರನೋರ್ವಾ ||೫|| ಭರದಿನಡೆತಂದಾಮಹೀಪಮೇಶನಚ
ರಣದೊಳು ಮಣಿಯುತ್ತಲೆಂದ ಘುರಕೆಬಂದಿಹವಾರ್ತೆಯನು ನೃಪ
ಗೊರದನಂದೂ ||೬||

ರಾಗ ಸಾರಂಗ ಅಷ್ಟತಾಳ

ಕೇಳು ಮುಲೋಕಖ್ಯಾತಾ । ನಮ್ಮಯಮಾತಾಕೇಳು ರೇಣು
ಕೆಯತಾತಾ । ಪೇಳುವರಂಜುವೆನಾವಿಂದೂ । ಭೂಪರುಕಾಳಗಕೆಂದೆ
ನುತ ಬಂದರುತಾತಾ ||೧|| ಕ್ಷಿತಿಪಾಲರೆಲ್ಲರನುಕೂಡಿಸಿ ಮುದ್ದುಸು
ತೆಯನಿಂದಿನಲಿನೀನೂ । ಯತಿವಂಶಜನಿಗಿಗೆತ್ತ್ರಯಂದೆಂಬ ಕೋಪ
ದಿಕೃತವೀರ್ಯಜಾದಿಗಳೂ ಮಾತ್ಸರದೊಳೂ ||೨|| ವಿರಚಿಸುವರುಸೂ
ರೆಯೂ । ಸುಮ್ಮನೆನೀನುಯಿರುವೆಯದ್ಯಾಕೆಜೀಯಾ || ಕರಸುಮಾರ್ಬ
ಲವನ್ನು ದುರಕೆಸನ್ನಹನಾಗು ಅರಿಗಳನೆಲ್ಲರಸೀಳುಬೇಗದೊಳು ||೩||

ಭಾಮಿನಿ || ಚರರನುಡಿಕೇಳುತಭೂಪತಿಕರಸಿ ನಿಜಸೈನ್ಯವನು

ಯುದ್ಧಕೆ ಪೊರಟುಪುರವನು ಸೂರೆಗೈವವದಿರನು ಹೊರವಡಿಸೀ ॥
ಬೆರಸಿದುದುಬಲವೆರಡುತುರಗಕೆ । ತುರಗಪಂಗ್ತಿಗೆಪಂಗ್ತಿದಂತಿಗೆ ಕರಿ
ಭಟಾಳಿಗೆ ಭಟರುಹೊಯ್ದಾಡಿದರು ಸಮತಳಿಸೀ ॥೧॥

ರಾಗ ಮಟ್ಟೆತಾಳ

ಯಿಂತುತವ್ಮೊಳುಭಯಭಟರು ಮುಳಿದುಹಳಚಲೂ। ದಂತಿ ಹಯವರೂರಥಸಹಿತಧರಣಿಗುರುಳಲೂ॥೨॥ ಪಿಂತಿರುಗುವಭಟರಕಂಡುರೇಣುಕೆಯಪಿತಾ ॥ ಕಂತುಪಿತನಸೆನದು (ಮುಂದೆ) ರಥವಮುಂದೆಸರಿಸುತಾ ॥೨॥ ಅರಸನವರವಾಹನಾದಿಗಳನು ಖಂಡಿಸೀವಿರಥವನ್ನು ಮಾಡೆಕಾರ್ತವೀರ್ಯಪರಿಕಿಸೀ ॥೩॥ ಹರಿಸಿತನ್ನರಥವಕೋಪದಿಂದಅವನನೂ। ಕರದುಪೇಳ್ದನೆಲವೊ। ನೃಪರಕರಸಿಸುತೆಯನೂ॥೪ ಧರಣಿಸುರಗೆಕೊಟ್ಟನೀಚಕೇಳೊನಿನ್ನನೂ ॥ ತರಿವೆನೀಗಪರಿಕಿಸೆನುತಸುರಿದಸಂಬನೂ ॥೫॥ ಸರಳಸರಳಿನಿಂದ ತರಿದುನುಡಿದಸಮರವಾ ॥ ಅರಿತಪ್ರೌಡನೀನುನಿನಗೆ ಕ್ಷಾತ್ರಧರ್ಮವಾ ॥೬॥ ಒರವುದೇನುತರಳೆತನ್ನುಮನಕೇ ಬಂದನಾ ॥ ವರಿಸಿಕೊಂಡಳೆನುತಲಿಟ್ಟನವನಿಪಾಲನಾ ॥೭॥

ಭಾಮಿನಿ ॥ ಕ್ಷಿತಿಪರಾಸಮಯದಲಿ ರಾಕಾವತಿಯಪುತ್ರನತೇರತೊಲಗಿಸುತತಿಮುನಿದು ಬಾಣಗಳಸುಂದರುರೇಣುಕನಮೇಲೆ । ಯತಿಪಕೇಳ್ವಿಚಿಯವಿರೇಣುಕೆ ಪಿತನಿಗಪಜಯುಬಪ್ಪುದೆ ಮುನಿಪತಿಯುಚೇತಜಬಂದವೀಸಾನಕೆಕೈಸೀಡೀ ॥೧॥

ರಾಗಕೇತಾರ ಗೌಳ ಅಷ್ಟತಾಳ

ತರುಣಿಯತಾತನಮುಸುಕಿದಭೂಪರಸೆರವಿಯನೀಕ್ಷಿಸುತಾ॥೧॥
ತಿರುಹಿದಭಾರ್ಗ್ರದೊಳಿಟ್ಟನು ಕೋಪದಿವರಸತ್ಯವತಿಯಜಾತಾ ॥೨॥
ಹರನಶೂಲದಹತಿಗೊರಗಿದಗಜದೈತ್ಯನುರುಪರಿವಾರದಂತೆ। ಧರಣೀ
ಶರೀತನಕುಶಹತಿಯಿಂದರೆಗುರುಳಿದ ರಾಕ್ಷಣಕೇ ॥೩॥ ಪರಿಕಿಸಿಕೃತವೀ

ರ್ಯಸುತನು ಬ್ರಹ್ಮದ್ವೇಷಬರುವದಿಂದಿನೊಳುಸಾನೂ । ಧುರವನೆ
ಸಗಬಾರದೆಂದು ತಿರುಗಿದಾನುಪುರಕೆದುವ್ಮ್ಯಾನದಲೀ ॥ ೪ ॥ ಬಳಿಕ
ಭೂಪಾಲನು ಕಾಣುತ್ತತನ್ನಯಅಳಿಯನಸಹಸವನೂ ॥ ಯಿಳೆಯೊ
ಳಗ್ಗದವೀರಬುಧನಾದರೇನೆಂದು ತಳೆದನುಕೋಪವನೂ ॥ ೪ ॥

ಭಾಮಿನಿ ॥ ಒರವೆನಾಮುಂಗಥೆಯ ಶೌನಕಧರಣಿಸುರಕೇಳ್ಮ
ದದಿ । ರೇಣುಕವಿರಚಿಸಿದನು ದ್ವಾಹವನುನಂದನೆಗೆತೋಷದಲೀ ॥
ಕರಿತುರಗಗಳಬಳುವಳಿಯು ಕೊಟ್ಟುರುತರಪ್ರೇಮದಲಿ । ಯಾನವಭ
ರದೊಳೇರಿಸುತಳಿಯನನು ಕಳುಹಿದನುಸುತೆಸಹಿತಾ ॥ ೧ ॥

ವಾರ್ಧಿಕ್ಯಾ ॥ ತರುಣಿಸಹಬಂದು ಜಮದಗ್ನಿಪುಣ್ಯಾಶ್ರಮದಿ
ಹರುಷದಿಂದಿರುತಿರಲ್ ಕೆಲವುಕಾಲಾಂತರಕೆ ತರಳರುದಿಸಿದರೇಕವೀರೆ
ಗಂಗಜಸನ್ನಿಭನರ್ಾಲ್ವಕ್ಕೈದನೆಯೊಳೂ ॥ ಧರಣೀಶರಂಕೊಲ್ಲಲವ
ತರಿಸಬೇಕೆಂದು । ಹರಿಮನದಿನೆನದುಸಾರದರುಷಿಪಸನಂ । ಕರೆದುಭರ
ದಿರೇಣುಕೆಯಡೆಗೆ ಕಳುಹಲವನೈತಂದನೇನೆಂಬೆನುತ್ಸವದೊಳೂ॥೧॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಬರಲುನಾರದನಂಘ್ರಿಕಮಲಕೆ ಯೆರಗುತಾಜಮದಗ್ನಿಕೇಳ್ದ
ನುಸುರಮುನಿಪನೀಬಂದಕಾರ್ಯವನೊರವುದೆನಲೂ ॥ ೧ ॥ ಅರುಹಿ
ದನುಋಷಿಕೇಳುನಿನ್ನಯತರುಣಿಯುದರದಿ ಜನಿಪಸಡಶ್ರೀಯರೆಯುನಿ
ನಗೊರೆಯುಬಂದೆನು ಭರದೊಳೆನಲೂ ॥ ೨ ॥ ತರುಣಿರೇಣುಕೆನಗುತ
ಪೇಳ್ದಳು । ಹರಿಯುನಮಗೆಕುಮಾರನಾದಡೆ । ಧರೆಯೊಳಾವೇಧ
ನ್ಯರೆಂದೆನೆಸುರಮುನಿಪನೂ ॥ ೩ ॥ ಸರಿದನಾಕ್ಷಣದೇವಲೋಕಕೆ
ತರಳೆಕಾಲಾಂತರಕೆ ಗರ್ಭವಧರಿಸಿಪಡೆದಳು ಮಗನಭೂಮಿಪನೆರವಿಹ
ರನಾ॥ ೪ ॥ ಸುರರದುಂದುಭಿವೊಳಗಿದವು ಸುರತರುಣಿಯರುಪಾಡಿದ
ರುವಿದ್ಯಾಧರರು ಕೊಂಡಾಡಿದರು ಸುರಿವುತರಳಮಳೆಯಾ॥ ೫ ॥ ನೆರ
ದಋಷಿಗಳು ಶಿಶುವನೀಕ್ಷಿಸಿಹರಿಯನುವುದನು ತಿಳಿವುತಿಟ್ಟರುಪರಮ

ನಾಮವ ರಾಮನೆನುತಿತಿಹರುಷದಿಂದಾ ‖ ೬ ‖ ಮುನಿವನಿತೆಯರು ತೊಟ್ಟಿಲೊಳಗಾಜಿನುವಾಯನ ಶುಭದಿನದಲಿಟ್ಟುತಿವಿನಯದಿಂ ಪಾಡಿದರುಶೌನಕಮುನಿಪಕೇಳೂ ‖ ೭ ‖

ರಾಗ ಜೋಗಳಪದ

ಜೋಜೋನೃಪವಂಶಬಾಲಸುಶೀಲ ಜೋಜೋ ಜಮದಗ್ನಿ ಬಾಲಗೋಪಾಲ। ಜೋಜೋರೇಣುಕಾತ್ಮಜೆಯಸುಪುತ್ರ। ಜೋಜೋ ಭಕ್ತಪೋಷಣನೀಲಗಾತ್ರ। ಜೋಜೋ‖ ೧ ‖ಸರಸಿಜೋದ್ಭವಮುಖ್ಯ ಸುರನುತಚರಣಾ ‖ ಉರಗಾರಿಗಮನಾಸೇವಕೊದ್ಧರಣಾ ‖ ಪರಮ ಪಾವನಪಾರ್ವತೀಶಸುಪ್ರೀತಾ । ಹರಿರಾಜಶಯನ ಮುಲೋಕ ವಿಖ್ಯಾತಾ‖ ೨ ‖ ಜೋಜೋ‖ ೨ ‖ ಕಾಯಜಾಜಜನಕಪರಾತ್ಪರಧಾಮ। ಮಾಯವಿಗ್ರಹ ಮಧುಕೈಟಬಭೀಮಾ ‖ ತೋಯಜಾಂಬಕಕೋ ಪರಹಿತನಿಸ್ಸೀಮಾ । ಪ್ರಾಯಚರಿತಹರಿಭಾರ್ಗವರಾಮಾ । ಜೋಜೋ ‖ ೩ ‖

ಭಾಮಿನಿ ‖೨೨೭‖

ಹರಿಯನಿಂತಬಲೆಯರುಪಾಡುತ ತೆರಳಿದರುತಮ್ ತಮ್‌ಗೃಹ ಗಳಿಗುರುತರೋತ್ಸಾಹದಲಿ ರೇಣುಕೆಸಲಹಿದಳುಮಗನಾ ‖ ವರುಷವ ಷ್ಟಕವಾಗಲಾ ಮುನಿವಿರಚಿಸಿದನುಪನಯನವನುಮಿಗೆ ತರಳರೊಡ ನೋದಿಸಿದನಧ್ಯಯನವನುಬಲವಿನಲಿ ‖ ೧ ‖ ಪರಶುರಾಮನುಜನಿ ಸಿದಾದಿನಧರಣಿಪಾಲಕ ಕಾರ್ತಿವೀರ್ಯಾನಪುರದಿಬಹಳುತ್ಪಾತತೋರಿ ತದೇನನುಸುರುವೆನೂ‖ ಅರಸನದಕಾಣುತ್ತಮಾತೆಯಪೊರೆಗೆ ಬಂದಾ ಕೆಯಪದಾಬ್ಜದಿ। ಯರಗೆಭಯಯುತನಾದ ತನಯನನಪ್ಪಿಕೇಳಿದಳು

ರಾಗ ತೋಡಿ ಆದಿತಾಳ ‖

ಯೇನುಕಾರಣಬಂದೆಯಿಂದಿನಲಿನೀನು ಯನ್ನಬಳಿಗೇ ‖ ನಿನಗವಮಾನವಾವುದು ಬಂದುದನುನಾಕಾಣೆನಿವರೇಗೆ ‖ ಸುಮ್ಮನೆ

ಮೌನವ್ಯಾತಕೆಪೇಳು ಭಯನಿನಗೇನೆನಲೂ। ನಿಜವಮಾತೆಗೆಂದನೂ॥ ಮಾತೆಲಾಲಿಸಿಕೇಳುವಮಾತನೂ । ನೀದಯದಿವುನದಲೀ॥ ಬೇರೆತೋರ್ಪುದಿದೇನು ಬಹುಳುತ್ಪಾತವೆನ್ನಿ ಪುರದೀ ॥ ಅಪ್ಪುದಿದೇನುಕತಕೋಸುಗವೆಂಬುದನು ನಿನ್ನೋತು ಪೇಳುಭರದಿಗಜಹಯವ್ರಾತಕಂಬನಿದುಂಬಿಹವುಬಲುಕಾತರಿಸುವದ್ಯಾಕೆಪೇಳಿದಾ ॥ ೨ ॥ ಕಂದಕೇಳುತ್ಪಾತದಿಂ ಭಯವೆಂದುನಿನಗಹದಲ್ಲಿ ಸಜ್ಜನವೃಂದ ವಂದಿತನಿತ್ತವರಬಲದಿಂದಲವನಿಪರೆಲ್ಲರಂಜುವ । ರೆಂದಿಗಾದರು ವಿಪ್ರದ್ರೋಹವದೊಂದವಿಲ್ಲದಿರ್ದಡೆ ಹೊಂದಲರಿಯದ ದುಃಖಪತ್ರಿಸುನಂದನನನೆನೆಯುತ್ತಲಿರುನಡೇ ॥ ೩ ॥

ಕಂದಪದ್ಯ ॥ ಜನನಿಯು ನುಡಿಯಂಕೇಳ್ದಾಜನಪತಿ ಚಿಂತೆಯತ್ಯಜಿಸಿಸಂಭ್ರಮದೊಳ್ ತಾ ವನೆಗೈದಿದಮುಂಗಥೆಯಂಮುನಿಕುಲಸಂಭವಲಾಲಿಸುಸನ್ಮುದದಿಂ ॥ ೧ ॥ ೨೩೩

ರಾಗ ಕೇದಾರ ಗೌಳ ಅಷ್ಟ ತಾಳ

ಜನಪಮರ್ದನನೊಂದುದಿವಸದಿ ತನ್ನಯಜನಕನಂಘ್ರಿಯೊಳೆರಗೆ । ಮನುಮಥಾರಿಯು ಬಳಿಗೈದಿಕಲಿವೆ ಬಾಣಘನವಿದ್ಯವನೂಮುದದೀ ॥ ೧ ॥ ಕರುಣಿಸು ನೇಮವನೆನುತಲಪ್ಪಣೆಗೊಂಡು ತೆರಳಿರೇಣುಕಜಾತೆಯಾಚರಣಾರವಿಂದದೊಳೆರಗಲಾಗ । ನೆಗಹಿಹರುಷದಿಲಕ್ಷ್ಮಿಮಿಪ್ರಿಯಾ ॥ ೨ ॥ ತಾಯೆಲಾಲಿಸು ಶಂಕರನಬಳಿಗೈದಿನಾಸಾಯಕವಿದ್ಯವನೂ ॥ ಶ್ರಿಯರಸನಮಿತ್ರನೊಡನೆ ತಿಳಿವೆನಾನು ಈವುದಪ್ಪಣೆಯಂದನೂ॥ ೩ ॥ ಹರನಮೆಚ್ಚಿಸಿನೀನು ಶಸ್ತ್ರವಿದ್ಯಂಗಳನರಿತುಬೇಗದಿಬಹುದು ಪುರಹರಸದ್ಯದಿಒಲಿರ್ಗಲಿನಿನಗೆಂದು ಹರಸಿನೇಮವನಿತ್ತಳೂ ॥ ೪ ॥ ೨೩೭ ॥

ಭಾಮಿನಿ ॥ ಜನನಿಜನಕರನುಜ್ಞೆಗೊಂಡಾ ಮನುಮಥಾರಿಯು ಕಾಂಬತವಕದಿ।ಮುನಿಕುಲೋದ್ಭವಬಂಧುರಜತಾಚಲದತೊಪ್ಪಲಲೀ॥

ಅನಶನವ್ರತದಿಂದ ಶಿವಪದವನಜವನು ಧ್ಯಾನಿಸುತಲಿರಲದನನಲನೇತ್ರನು ತಿಳಿದುತನ್ನಯರಮಣಿಗಿಂತೆಂದಾ ॥ ೧ ॥ ೨೩೮ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಗಿರಿಶನುಜೆಕೇಳೆಮ್ಮ ವನದಲಿ ತರಳ ಭಾರ್ಗವಬಂದುತಪವನು ವಿರಚಿಪನುನಾನಿಂದುವರವನು ಕರುಣಿಸುವಡೇ ॥ ೧ ॥ ತೆರಳಬೇಕೆಂದನುತ ನಂದೀಶ್ವರನಕರದಿಂತೆಂದ ನೀಕ್ಷಣ। ಕರಸುಪರಿವಾರಗಳನೆನುತಾತ್ವರಿತದಿಂದಾ ॥ ೨ ॥ ಏರಿದನುವೃಷಭನನು ಪೊರಟರು ವೀರಗುಹಗಜವದನ ಮುಖ್ಯರು ಸಾರಿದನು ಭೃಗುಕುಲಜನಲ್ಲಿಗೆ ಮಾರಹರನೂ ॥ ೩ ॥ ೨೪೧ ॥

ರಾಗ ಸಾವೇರಿ ಅಷ್ಟತಾಳ

ತರಳನುತಪಗೈವಪರಿಯನು । ಚಂದ್ರಧರಕಂಡುಕರುಣದೊಳೆಂದನೂ ॥ ತರುಣಕೇಳ್ ತಪಸಾಕು ಮನದೊಳೂ । ಆಸೆಯಿರುವದಪೇಳೆನ್ನೊಳೂ ॥ ೧ ॥ ಈವೆನೆಂದೆನೆ ಕೇಳಿರಾಮನೂ । ಪೇಳ್ದದೇವಕೇಳಸ್ತ್ರವಿದ್ಯವನೀನೂ ॥ ಓದಿಕಲಿಸುದಿವ್ಯಾಯುಧವನೂ । ಈಗ ನೀಕಿದಕೃಪೆಯೊಳಗೆಂದನೂ॥ ೨ ॥ ಮುನಿವಂಶದಿಂದಲುತ್ಪನ್ನನೂ ನೀನುನಿನಗಸ್ತ್ರವಿದ್ಯದಿ ಫಲವೇನೂ । ಯನಗಿದಪೇಳುಶ್ರೀಘ್ರದೊಳಂದೂ । ಪೇಳ್ವನನಲನೇತ್ರನು ಬಾಲನಿಗಂದೂ ॥ ೩ ॥ ಋಷಿವಂಶದಿಂದನಾನುದಿಸಿದೇ । ನೀನು ಈವಿದ್ಯೆಗಳಪೇಳಲಾಗದೇ । ವಿಷಮಲೋಚನಕೇಳು ಮುನಿಗಳೂ । ಯಲ್ಲರಿಷ್ಟ ವಿದ್ಯಗಳನರಿಯರೆ ಹೇಳೂ ॥ ೪ ॥ ಯನೆಜ್ಞಾನದೃಷ್ಟಿಯೊಳೀತನು । ವಿಷ್ಣುವೆನುವದ ತಿಳಿದು ಮಹೇಶನೂ । ವನಿತೆಯಮೊಗನೋಡಿನಗೆಯೊಳೂ। ಪೇಳ್ದ ಜನಪವಂಶಾಂತನಾದವನೊಳೂ॥೫॥ ತಿಳುಹೂವೆಅಸ್ತ್ರವಿದ್ಯಂಗಳಾ। ದಿವ್ಯಹಿಳುಕನೀವೆನು ಬೇಕಾದವುಗಳಾ । ತಳುವದೆನ್ನಯಕೂಡೆಬಾಯಂದೂ । ತನ್ನನಿಳಯಕ್ಕೆ ಕರದೊಯ್ದನುಘನಸಿಂದೂ ॥ ೬ ॥

ಭಾಮಿನಿ ॥ ಮನೆಯೊಳಾವಮಾಧವನನಿತ್ಯದಿ। ತನುಜರಿಂಗೂ
ಮಿಗಿಲುಮೋಹದಿಯನಲನೇತ್ರನು ಪೋಷಿಸುತ ಕಲಿಸಿದನುವಿದ್ಯ
ವನೂ ॥ ಘನತರದದಿವ್ಯಾಸ್ತ್ರಸಂಗವ ಮನವೊಲಿದುಕೊಟ್ಟನುಮಹೀ
ಶರತನುವಬಿಗಿವುದಕೆಂದುನುಡಿದನು ನಗುತಮದನಾರೀ ॥ ೧ ॥

ರಾಗ ಬೈರವಿ ಝಂಪೆತಾಳ

ಹರನಿಂತು ವಿದ್ಯವನೂ । ಅರುಹುತಿರೆ ಮುರಹರನು
ಹರುಷದಿಂದೊಂದುದಿನ ಒರದನೀಶನೊಳೂ ಅನುಕಂಪನಿಧಿ
ಕೇಳುಜನನಿಜನಕರನಗಲಿ । ದಿನಬಹಳವಾಯಿತೆಂದುಮನೆಗೆಪೋಗು
ವೆನೂ॥ ೧ ॥ ಕರುಣಿಸಾಜ್ಞೆಯನೆನಲುಮುರಹರನು ನಸುನಗುತಪರಿ
ಪೂರ್ಣವಾಯ್ತು ಮನದಿರವುನಿನಗೆಂದಾ॥೨॥ ಪರರುವಿದ್ಯವನೀನು
ವರೆಯಬೇಹುದು ನಿನ್ನ ಚರಣಕಮಲದಹೊರೆಗೆಕಿರಿದುದಿವಸದೊಳೂ॥
ಬರುವೆತಾನೆಂದೆನುತಸ್ಮರಹರನುಬೀಳ್ಕೊಂಡು ಗಿರಿಜೆಯೊಡೆಗೈತಂದು
ಚರಣಕಮಲದೊಳೂ ॥ ೩ ॥ ಯಾರಗೆಕೇಳ್ದಳು ರಾಮಸರನೇನನರು
ಹಿದಶರವಿದ್ಯಗಳನಾವಶರವಕರುಣಿಸಿದಾ ॥ ತಿಳುಹಿಸೆಂದಳು ಸಿರಗಳನೆ
ಗಹಿಕರುಣದಲಿ ನಳಿನಭವಭವಮುಖ್ಯಹಿಳುಕಿತ್ತನೆಂದಾ ॥ ೪ ॥ ಎನ
ಲಂಬಿಕಾಸ್ತ್ರವನೂ । ವಿನಯದಿಂದಿತ್ತುಗಿರಿತನುಜೆಕೇಳ್ದಳು ಮತ್ತೆ
ಮನದಬಯಕೆಯನೂ ॥ ಕರುಣಿಸುವೆಪೇಳೆನಲು ಶರತೀರಿದೀವಿದ್ಯವ
ನೂಕೊಡುವುದೆನ್ನೊಳ್ ಕೃಪೆಯಿರರುಮೋಹೆಂದಾ ॥ ೫ ॥ ತುಂಬಿ
ರುವದೀತೂಣವಂಬನೀನೆನಿತುಗಿಯೋ। ಕಂಬುಅರಕೊಳ್ಳೆಂದು ಅಂಬಿ
ಕೆಯುಮುದದೀ ॥ ಕೊಡಲದನುಕೈಕೊಂಡು ಅಡಿಗೆರಗಿಬಿಳ್ಕೊಂಡು
ಪಡದವರನೀಕ್ಷಿಸುವಕಡುತವಕದಿಂದಾ ॥ ೬ ॥ ಹರಿತಂದುರುಷಿವರ
ನಚರಣಾರವಿಂದದೊಳಗೆರಗೆಮಗನನು ನೆಗಹಿಹರಸಿಬೆಸಗೊಂಡಾ॥೭॥

ರಾಗ ಸಾಂಗತ್ಯ ರೂಪಕತಾಳ

ಬಾಲಕಲಾಲಿಸು (ಶೂ) ನಿನಗೇನುವಿದ್ಯಶೂಲಪಾಣಿಯುಕಲಿ

ಸಿದನೂ। ಪಾಲಿಸಿದನದೇನುಶರವನಿತ್ತನಲೆಂದ ಶ್ರೀಲೋಲಪಿತಗು ಸುರಿದನೂ ॥ ೧ ॥ ಜನಕಲಾಲಿಸುಶಸ್ತ್ರವಿದ್ಯವನರುಹಿದ । ಎನಗೆ ದಿವ್ಯಾಸ್ತ್ರಸಂಘವನೂ ॥ ಮನುಮಥಾಂತಕನಿತ್ತಬತ್ತಳಿಕೆಯ ಕೊಟ್ಟ ಳನಲಲೋಚನನ ವಲ್ಲಭೆಯೂ ॥ ೨ ॥ ಎನಲೆಂದನೆಲೆಪುತ್ರನಿನ ಗೊಂದುವರವನ್ನು ವಿನಯದಿಂದೀವೆಭೂಪರನು ॥ ದಿನಪಜನೂರಿಗ ಟ್ಟುವಗತ್ಯಬರಲೆಂದು ತನುಜನನಪ್ಪಿದಮುನಿಯೂ ॥ ೩ ॥

ರಾಗ ಕೇದಾರ ಗೌಳ ಅಷ್ಟ ತಾಳ

ಜನಕನಬೀಳ್ಕೊಂಡು ಹರುಷದಿತನ್ನಯ ಜನನಿಯಬಳಿಗೆಬಂ ದೂ॥ವನಜಾಕ್ಷ ಪಾದದೊಳೆರಗಲುನೆಗ್ಗಹಿದಳ್ ವಿನಯದಿಬಾಲಕನಾ॥ ಕೇಳಿದಳಸ್ತ್ರವಿದ್ಯಂಗಳೇನರುಹಿದವ್ಯಾಳಭೂಷಣನಿನಗೇ ॥ ಪೇಳೇನು ಬಾಣವನಿತ್ತನೆಂದೆನಲೆಂದ ಖೂಳಮರ್ದನಮಾಯೇ ॥ ೨ ॥ ವರ ಪಾಶುಪಥಮುಖ್ಯಶರವಿತ್ತನೀಶನು ಗಿರಿಜೆತೂಣೀರವಂತಾ। ಕರುಣಿ ಸಿದಳು ಬಾಣವಿದ್ಯವನರುಹಿದಹರನೆನಲೆಂದಾಳೂ ॥ ೩ ॥ ಮೃತಿದೂ ರವಾಗಲೀನಿನಗೆ ನೀನಿಳೆಯೊಳು ಕ್ಷಿತಿಸೂರ್ಯರಿರುವನಕಾ ॥ ಅತಿಕೀ ರ್ತಿಯುತನಾಗಿಬಾಳಿರುಯನಲೆಂದ ಶತಪತ್ರಜಾತೆಯೇ ॥ ೪ ॥ ಜನ ಪರಗೆಲುವಂತಶಕ್ತಿಯನಿತ್ತನುಜನಕನೀನಾಯುವನುಪದಮಸ್ನೇಹಿತ ನಿರುವನಕಕೀರ್ತಿಯ ಕೇಳವ್ವತನಗಾರುಸರಿಯೆಂದೆನೊ ॥ ೫ ॥

ಭಾಮಿನಿ ॥ ತನಯನನು ತೆಗದಪ್ಪಿರೇಣುಕೆತನುಜೆತೋಷ ದೊಳಿರಲಿಕೊಂದಿನ ವನಜನಾಭನು ಮತ್ತೆನುಡಿದನು ವಿಘ್ನನಾಶನ ನಾ ॥ ಮನವಲಿಸಿನಾಪರಶುವಿದ್ಯವ ಘನತವಕದಿಂಕಲಿತು ಬಹೆ ನೆಂದೆನುತನೇಮವಪಡೆದು ಕೈಲಾಸಾದ್ರಿಗೈತಂದಾ ॥ ೧ ॥

ಕಂದಪದ್ಯ ॥ ಬಂದಾಗಣಪತಿಯಡೆಗಂ ! ವಂದಿಸೆತೆಗದಪ್ಪು ತಹರಸುತಪರಮಾ । ನಂದದಿಕುಶಲವಕೇಳುತಬಂದಿಹಕಾರಣವೇನು ಕೇಳಲಚ್ಯುತನೆಂದಂ ॥ ೧ ॥

ರಾಗ ಬೇಗಡೆ ತ್ರಿವುಡ ತಾಳ

ಹರಪುತ್ರ ಕೇಳು ಬಿನ್ನಪವಮನಗೊಟ್ಟು ಅರುಹುವೆನೀಯನ್ನ ಮೇಲ್ದಯವಿಟ್ಟೂ॥ ೧ ॥ ಪರಶುವಿದ್ಯವಯನಗೊಲಿದು ಪ್ರೇಮದಲಿ। ಅರುಹಿಸು ತದ್ವಿದ್ಯವನ್ನು ಶ್ರೀಘ್ರದಲ್ಲಿ॥ ಸ್ಮರಿಸುತ್ತಲಿಹೆ ನಿನ್ನ ದಿವ್ಯ ಪಾದವನೂ ॥ ಕರುಣದೊಳಾವಾಗ ಮರೆಯಾದೆನಾನೂ ॥ ೨ ॥ ತರಳಕೇಳ್ನಾ ಪಿಡಿಯುವ ಪರಶುವನೂಧರಿಸಲರಿದು ಶಕ್ರಾದ್ಯರಿಗಿಂದು ತಾನೂ ಮೆರವಕೈದುವನಿತತಾಳ್ವೆಯುಯುನಲೂ । ಹರಪುತ್ರಗೆಂದ ಶ್ರೀಧರಕರುಣದೊಳೂ ॥ ೩ ॥ ನಿನ್ನಯಕರುಣಕಟಾಕ್ಷ (ದೊಳ್) ಸಂಪೂರ್ಣ । ಯನ್ನ ಮೇಲಿರಲಾಗದೆ ಶೂರ್ಪಕರ್ನ । ಮನ್ನಿಸಿಪರಶ್ವಧವನ್ನುಯನಗೇ । ಮುನ್ನಕೊಟ್ಟೀಕ್ಷಿಸುನಗನೇಕಡೆಗೇ ॥ ೪ ॥ ವರಬ್ರಹ್ಮಚಾರಿಕೇಳೆನ್ನ ಶೌರ್ಯವನೂ । ಪರಿಕಿಪೊಡಿದೆಕೊ ದಿವ್ಯಾಯುಧವನ್ನು । ತಿರುಗಿಸುಕಾಂಬೆನೆಂದೆನೆ ಬೊಮ್ಮಪಿತನೂ । ಭರದಿಂದತಿರುಹಲಚ್ಚರಿಪಟ್ಟನವನೂ॥ ೪ ॥

ಭಾಮಿನಿ ॥ ಹರಿಯುಪರಿಯನುಕಂಡುಗಜಮುಖನಂದನೀತನು ಭೂಮಿಪಾಲರತರಿಯಲೋಸುಗ ಜನಿಸಿದಚ್ಯುತನೆಂದುಪ್ರೇಮದಲೀ ಅರುಹುತೀರ್ದನು ವಿದ್ಯವನು ಭೂಸುರನೆಕೇಳೊಂದಿವಸ ರೇಣುಕೆಭರದಿಮೀಯುವೆನೆನುತಬಂದಳು ನರ್ಮದಾನದಿಗೇ

ವಾರ್ಧಿಕ್ಯಾ ॥ ವನಿತೆನದಿಯೊಳ್ ಮೀಯುತಿರುವವ್ಯಾಳ್ಯದೊಳಿತ್ತ ಥನಥನಬಲವಾತ್ರಸಹ ಬಂದುನರ್ಮದೆಯ ವನದಿಕ್ರೀಡಿಸುವದಂಕಂಡುಮಮಕಾಂತಸಹಿತಿವರಂತೆ ವಿಹರಿಸುವದೇ ॥ ಉರುಕೋಪಯುತನೆನ್ನರಮಣನೆಂದರೆಬೇಗ । ವಿರಚಿಸಿಯೆಸ್ನಾನವಂ । ರಮಣನಲ್ಲಿಗೆಬರಲ್ಕರದು ಮುನಿನಾಥನಶಿಕೋಪದಿಂ ಜವನಂತೆ ತನ್ನ ಸತಿಗಿಂತೆಂದನೂ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ತರುಣಿಕೇಳ್‌ಗಂದರ್ವರಾಜನಲೆರಕವಾದುದೆ ಚಿತ್ರಭಳಿಭಳಿರ
ರರೆಪುಶ್ಚಂಲಿದುರುಳೆ ನೀನಶಿತ್ವರಿತದಿಂದಾ ॥ ೧ ॥ ತೊಲಗುವಾವು
ಗೃಹದಿಂದಲೀರ್ದಡೆ ತಲೆಯಹೊಯ್ಯುವೆನೆನಲುಕೇಳುತ । ಲಲನೆಭ
ಯದಲಿಪತಿಗೆಪೇಳ್ದಳುಲಲಿತವಚದೀ ॥ ೨ ॥ ಅರಸಕೋಪವಿದೇಕೆಯ
ನ್ನಯತರಳಭಾರ್ಗವನೀನುಸಾಕ್ಷಾತ್ । ಹರನುಪತಿಯಿನ್ನುಳಿದಸು
ರಕೋಪವಮುನಿಸತನ್ನಯತರಳರೊಳುಹಿರಿಯುವನಕರವುತೊದರವನ
ಬಳಿಗೇ ॥ ೪ ॥ ಯುಲವೊವಸುಕೇಳೆನ್ನವೂತನು ಲಲನೆಯುಶೀಘ್ರದ
ಲಿಭರದೀ । ತಲೆಯುನರಿಯಾನಲೊರದನಾ ಪಿತಗೊಲವಿನಿಂದಾ॥ ೫ ॥
ತಾತ್ರಕೊಲ್ಲುವದುಂಟೆ ಪುತ್ರರುವೂತೆಯುನು ನೀನಿಂತಕರ್ಕಶವೂತ
ನಾಡದಿರೆನಲು ಶಾಪವನಾತಗಿತ್ತಾ ॥ ೬ ॥ ವರಬ್ರಹ್ಮತ್ಬಾಣಾಕ್ಯ
ನೆಂಬನಕರದು ಪೇಳಿದಪುತ್ರಕೇಳ್ನೀಭರದೊಳೀಕೆಯು ಶಿರವನರಿಯುನ
ಲೆಂರಹನವನೂ ॥ ೭ ॥ ಒರೆಯುಬೇಡಿದತಾತಯನ್ನೊಳು । ತರಳರರ
ವರೆವೂತೆಯುನುಯುನೆಭರದಿ ಶಾಪವನಾತಗಿತ್ತನುವರಮುನೀಂದ್ರಾ॥
ಬಳಿಕುಳಿದರೀರ್ವರನು ಕರದೆನೆಯಿಳೆಯುವುರ್ಕೇಳಗ್ರಜರ ವೊಲಳು
ಕದೆ ನಲವರಿಂಗೆಶಾಪವಮುಳಿದುಕೊಟ್ಟಾ ॥ ೯ ॥ ಅರುಹಿನೊಳ್ಪಿನು
ರಾಮನೋರ್ವಗೆ ಭರದೊಳೆನುತಾ ರಜತಶೈಲದಲಿರುವ ಪುತ್ರನ
ಕ್ರೂರರವದಲಿಕರದನಂದೂ॥ ೧೦ ॥

ವಾರ್ಧಿಕ್ಯ ॥ ಹರಪುತ್ರನಾಜ್ಞೆಯಂ । ಪರುಶುವಂಕೊಂ
ಡದಂ । ತಿರುಗುತಿಹವ್ಯಾಳ್ಯದೊಳ್ । ಪಿತಕರದಶಬ್ದಹರಿಕೇಳುತಾ
ವಿಪ್ನರಾಜನಂ ಬಿಳ್ಕೊಂಡುಜನಕನಿರ್ದೆಡೆಗೆಬಂದೂ ॥ ಧರೆಯುವೆ
ಲ್ಕೆಡದಗ್ರಜರಕಂಡು ದುಃಖದಿಂ । ದಿರುವವೂತೆಯುನೋಡಿ ವುರು
ಗಿವುನದೊಳ್‌ಮುಂದೆಭರಿತರೋಷಾವೇಶದಿಂದಿರುವತಾತನಡಿಗೆರಗು
ತಿಂತೆಂದನವಗೇ ॥ ೧ ॥

ರಾಗ ಮಾರವಿ ಏಕತಾಳ

ಜನಕನೆಬಿಡುಬಿಡುನಿನ್ನಯ ಕೋಪವನಿನ್ನಯ । ಮನಸಿನ
ಬಯಕೆಯನೂ। ಅನುಮಾನಸದಿರು ಕೈಗೂಡಿಪೆನೆನೆ ತನುಜಗೊರೆದ
ಮುನಿಯೂ॥ ೧ ॥ ತರಳನೆಕೇಳ್ನೀಪೇಳಿದತೆರದೊಳು ವಿರಚಿಪೆನೆಂದೆ
ನುತಾ । ಭರವಸವಿತ್ತರೆಪೇಳುವೆನೆನೆ ಪಿತಗೊರೆದನುಮಾಪ್ರೀತ॥೨॥
ಹರಕಮಲಜರಡ್ಡವಿಸಿತಡೆಯಲಿ ಬಗೆವನೆಯಿಂದಿನೊಳೂ॥ ಮೆರವರೆನಿ
ನೆಂದು ಜವಮಾಳ್ಪೆನು ಅರೆಕ್ಷಣಮಾತ್ರದೊಳೂ ॥೩॥ ತನುಭವಕೇ
ಳ್ನೀಪಿಡಿದಾಯುಧದೊಳುವನಿತೆಯಮೂರ್ಧ್ನಿಯನೂ॥ ಅನುಮಾನಿ
ಸದೀಕ್ಷಣಭೇದಿಸುಯೆನೆಮನುಮಥ(ಸಖಿ)ರಿಪುಸಖನೂ ॥ ೪ ॥ ಜಡಿ
ವುತಕೊಡಲಿಯಮಾತೆಯ ಶಿರವನುಕಡಿಯಲುನಿಮಿಷದೊಳೂ ॥ ಕೆಡೆ
ದುದುಕಂತುಕದಂದದಿ ಭೂಮಿಗೆಜಡಜಮುಖಿಯಶಿರವೂ॥ ೫ ॥ ಪರಿ
ಕಿಸಿತನಯನಸಹಸನೋಡೆಂದನು ವರವನುನಿನಗಾನೂ ॥ ಕರುಣಿಪೆ
ಮೂರನುಬೇಡೆಂದೆನೆ ಪಿತನೆರಗಿಕಮಲದ್ವಪನೂ ॥ ೬ ॥ ಕರುಣಿಸು
ಮಾತೆಯ ಜೀವವನೆನ್ನಯಹಿರಿಯವರೀಕ್ಷಣದೀ ॥ ಧರೆಯುಲಿಕೆಡವ
ರೇಳಲಿಯನಗೀದುರಿತವುಬರದಿರಲೀ ॥ ೭ ॥ ಎನಲದಕೇಳಿಕಮಂ
ಡುಲಜಲವನು ವನಿತೆಸುತರಮೇಲೆ ಮುನಿಪತಿಪ್ರೋಕ್ಷಿಸಲೆದ್ದರು
ಶ್ರೀಶನನೆನಯುತಲಾಕ್ಷಣದೀ॥ ೮ ॥ ಜಮದಗ್ನಿಯುಸುಪ್ರೇಮದಿತ
ನ್ನಯುವನಿತೆಸುತರನಪ್ಪಿಸುಮನಸರಚ್ಚರಿವಡಲೆಸದಿರ್ದನ । ನಮ
ರನಾಥನುಮುದದೀ ॥ ೯ ॥

ವಾರ್ಧಿಕ್ಯಾ ॥ ಧರಣಿಯಮರಶ್ರೇಷ್ಠಬಳಿಕಾ । ಯೋಚಿಸು
ತೆಂದ ತರುಣಿಯಂ । ಕೊಲಿಸಿದವಕ್ರೋದನದರಿಂದವನ । ಹೊರ
ವಡಿಪೆನೆನ್ನದೇಹದಲಿರದವೋಲೆಂದು ಖತಿಗೆ ಜರಿದೆಂದನಾಗಾ ॥
ಖಿರದಿರೆನ್ನೊಳ್ ನೀಚಬೇಗಪೊರಡೆಂದೆನಲ್ । ತ್ವರಿತದಿಂಪೊರಟು
ಘೋರಕಾರದಿಂದಋುಷಿವರನಿದಿರಿನೊಳ್ ನಿಂತುಕೈಮುಗಿದು ಭಯ
ದಿಂದಯತಿಪನೊಡನಿಂತೆಂದನೂ ॥ ೧ ॥

ರಾಗ ಶಂಕರಾಭರಣ ಅಷ್ಟತಾಳ

ಬಿಡಬೇಡಯನ್ನ ಬಿಡಬೇಡಾ । ಬಿಡಬೇಡಯನ್ನನು ಕೆಡುವ ಕಾರ್ಯಗಳನ್ನು ತಡದುನಿಲ್ಲಿಸುವಂಥ ಕಡುಪರಾಕ್ರಮಿನಾನೂ ॥ ಬಿಡಬೇಡಾ ॥ ೧ ॥ ಎನ್ನಿಂದ ಮನದಿಷ್ಟಕೈಗೂಡುತಿಹುದು । ಎನ್ನಿಂದಸರ್ವಸಂಪದಸೇರುವದೂ ॥ ಎನ್ನಿಂದಪಗೆಗಳನಿಗ್ರಹಿಸುವದೂ । ಎನ್ನಿಂದಲೋರ್ವ ರೋರ್ವರಿಗಂಜುತಿಹುದು॥ ೧ ॥ ಧುರಕೇಳ್‌ನಿನ್ನಿಂದಲಿಷ್ಟಸಿದ್ಧಿಗಳೂ । ದೊರವುದೆಂಬುದಕಂಡೆನಾನುಯಿಂದಿನೊಳೂ॥ ತರುಣಿಯಕೊಲಿಸಿದದುಷ್ಟಾತ್ಮನೀನೂ ॥ ತೆರಳೆನ್ನ ಮುಂದಿರಬೇಡೆಂದವುನಿಯೂ॥ ೨॥ ಕ್ರತುಜಪತಪಮುಖ್ಯಕಾರ್ಯಗಳೆಲ್ಲ । ಯತಿಪಕೇಳೆನ್ನಬಿಟ್ಟರೆಆಹದಲ್ಲಾ ॥ ಶಿತಿಕಂಠವಿಷ್ಣುಮುಖ್ಯರಿಗೆನ್ನನುಳಿದೂ । ಕ್ಷಿತಿಯೊಳವಾವಕಾರ್ಯವಮಾಡಲರಿದೂ॥ ೩॥ ಯಾಗಾದಿಷಟ್ಕರ್ಮವೆಲ್ಲವುಕೆಟ್ಟು । ಹೋಗುವದಾಕ್ಷಣ ಬಂದರೆಸಿಟ್ಟೂ ॥ ಬೇಗನಿನ್ನನುಕಾಮಿಸುವರೆಡೆಗೀಗಸಾಗು ನೀನೆಂದುಜರಿದ ಮುನಿಯಾಗಾ ॥೪॥ ಸುರಪಾಲಕನಮೇಲೆ ಬಲಿಯುಕೋಪದೊಳೂ। ವಿರಚಿಸಲಿಲ್ಲಾವೆ ಕಾರ್ಯವಪೇಳು । ಹರನನುಮೆಚ್ಚಿಸಿಸುರರವೈರದೊಳೂ ॥ ಸಿರಿಯಾನುಪಡೆಯರೆ ರಾವಣಾದಿಗಳೂ ॥ ೫ ॥ ದುರುಳಕೇಳೆನ್ನೊಳುಸಲುಗೆಯಿಂನೀನೂ । ಸರಿಯಾಗವಾದಿಸಬೇಡನಿನ್ನುವನೂ। ಉರುಹುವೆಗಳಹದಿರ್ಮನಕೆಬಂದಂತೆ । ತೆರಳುಬೇಕಾದಲ್ಲಿಗೀಕ್ಷಣ ಬ್ರಾಂತೇ ॥ ೬ ॥ ಮುನಿನಾಥಕೇಳೀಗ ಪೇಳುವನುಡಿಯಾ । ದಿನನಿತ್ಯದೊಳಗೆನ್ನಬಿಟ್ಟರೂಜೀಯಾ । ಮನಕೆಬೇಕಾದಾಗಲಾದರು ಯನ್ನಾನೆನೆಸಿಕೊಮುನಿನಾಥಕೇಳು ಸಂಪನ್ನಾ ॥ ೭ ॥ ಮನಕೆಬೇಕಾಗಲಾದರುನಿನ್ನ । ಸ್ಮರಿಸುವದನುಂಟೆ ತೆರಳುನೀಯನ್ನಾ । ಕರಕರಿಗದಿರೆಂದು ಮೊಗವತಿರುಹಲು ಧರಣಿಸುರನಿಗೆಂದ ಖತಿಯುಶೀಘ್ರದೊಳೂ ॥ ೮ ॥ ತೆರಳುವೆನಾನಾದರಾಜ್ಞೆಯನೀಯೆ ಬರುವದುಸ

ದ್ಯಾದಿನಿನಗೆಕೇಳ್ಕೇಡೂ ॥ ಸೆರಗಲಿಗಂಟಿಕ್ಕಿಕೊಂಡಿರುಯೆಂದುಸರಿದನುಕೋಪನಂತರ್ಧಾನಕಂಡೂ ॥ ೯ ॥

ಭಾಮಿನಿ॥ ಖತಿಯನಾಜಮದಗ್ನಿ ಬಿಡೆಕಂಡೆತಿಗಳೆಲ್ಲರುತೋಷಗೊಂಡರು ಶತದಳಾಂಬಕನೈದಿದನು ವಿಷ್ಣ್ವೀಶ್ವರನ ಹೊರಗೇ । ಯತಿಪಕೇಳೀಚೆಯಲಿವಮಾಹಿಷ್ಮತಿಪುರಾಧಿಪನೆಡೆಗೆ ಶಬರಪ್ರತತಿಬಂದೊಡೆಯಂಗೆ ಭಿನ್ನಹವಮಾಡಿದರುನವಿಸೀ ॥ ೧ ॥

ರಾಗ ಸಾರಂಗ ಅಷ್ಟತಾಳ

ಲಾಲಿಸಬೇಕುಜೀಯಾ। ಅರ್ಜುನರಾಯಾ । ಲಾಲಿಸ ॥ಪಲ್ಲ॥ ಲಾಲಿಸಬೇಕು ಸಮ್ಮುಖವನದಲಿ ಮೃಗಜಾಲಹೆಚ್ಚಿಯೆ ಬಲುಕಷ್ಟವೀವಾವು ॥ ಕರಡಿಕಾಡ್ಕೋಣಗಳೂ । ಶಾರಣಸಿಂಹಹರಿಣಿಶಾರ್ದೂಲಗಳೂ ॥ ಕರಿಖಡ್ಗಿಚಮರಿಮರಿಕಾಡಾನೆ ಶಲ್ಯಂಗಳು ಇರುವವಾರಣ್ಯದೊಳೂ ನಿರ್ಭಯದೊಳೂ ॥ ೨ ॥ ಪರಿಪರಿಗಿಡಗಳನು ಛೇದಿಸಿದಾವರೆಯುವಡರಿದದೇನೂ ॥ ಧರಣೆಯುಮರರೆಸಗುವತಪಸಿಗೆವಿಘ್ನವಿರಚಿಸುವದು ಕೇಳಯ್ಯಾಜೀಯಾ ॥ ೩ ॥ ವನಕೆನಿಶೀಘ್ರದೊಳೂ । ಸೇನೆಯುಸಹವಿನಯದಿಬಂದೀಗಳೂ ॥ ಘನದುಷ್ಟಮೃಗಗಳತರಿದೆಮ್ಮ ಪಾಲಿಸುಯೆನೆ ಭೂಪತೋಷದೊಳೂ ॥ ೪ ॥

ಕಂದಪದ್ಯ ॥ ಕರಸುತನಿಜಸೈನಿಕರಂ । ಬರಿಸುತತನ್ನಯಮಂತ್ರಿಯನತಿಸಂತಸದಿಂ ಪೊರಟಾರಣ್ಯಕೆಬಂದಂಬರೆಯುವೆ ನೀಕೇಳ್ಶೌನಕಮುಂಗಥೆಯಂ ॥ ೧ ॥

ರಾಗ ಮುಖಾರಿ ಆದಿತಾಳ

ಬೇಟೆಯಾಡುತ್ತ ಬಂದಭೂಪರಿವೃಢತಾನುಬೇಟೆಯಾಡುತ್ತ ಬಂದಭೂಪ ॥ಪಲ್ಲ॥ ಚತುರಂಗಸೈನ್ಯವನುಬರಿಸಿ । ಶಬರರವೆರಸೀ। ಅತಿತೋಷದಿಂದಧನು ವಧರಿಸೀ। ಕ್ಷಿತಿಪತಿತಾಸಂಭ್ರಮದೊಳುಸ್ನೇಹಿತತತಿಯು ಬೆರದುಪರಿಪರಿಲೀಲೆಗಳೊಳು ಅತಿಜವಗತಿಯಿಂದೇನೆಂ

ಬೆನುಯತಿಪತಿಜನುದಗ್ನಿಯ ಕ್ಷಿತಿಯಿಹವನಕೇ ॥ ಬೇಟೆಯಾ ॥ ೧ ॥
ದಿಕ್ಕುದಿಕ್ಕಿಗೆಬಲವಹರಹಿ। ಜನಗಳನೆರಹಿ। ಸೊಕ್ಕಿದಮೃಗವಕಡಿದು ಹರಹಿ। ಯಿಕ್ಕೆಲದಭಟರನೆರವಿಯನೋಡುತ ನಕ್ಕುನಲಿದು ಬಲು ಸೊಕ್ಕಿಲಿಶರಗಳದಿಕ್ಕರಿಸಿ ಭಗಜಕಿಕ್ಕುತಸೋವುತ ಕುಕ್ಕುರಗಳಮೃಗ ದಿಕ್ಕಿಗೆಬಿಡುತಾ ॥ ಬೇಟೆಯಾಡುತ್ತ ॥ ೨ ॥

ಭಾಮಿನಿ ॥ ಪರಿಪರಿಯಮೃಗಗಳನು ಭೇದಿಸಿಧರಣಿಪತಿತಾಬೇಟೆಯಾಡುತಲಿರುವ ವ್ಯಾಳ್ಯದೊಳಾದುದಾ ಮಧ್ಯಾಹ್ನವದಕಂಡೂ ॥ ಪುರಕೆಪೋಗುವೆನೆಂಬಸಮಯದಿ। ಕರಸಲಾಜಮದಗ್ನಿಯಲ್ಲಿಗೆ ತೆರಳಿದನು ಮಾರ್ಬಲಸಹಿತಲಾಭೂಪತೋಷದಲೀ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಅರಸನೈತಂದುದಕಾಣುತ್ತಋಷಿವರ್ಯ ಹರುಷದಿಂದಿದಿರಾಗಿಬಂದೂ ॥ ಕರದೊಯ್ದುದರ್ಭಾಸನವನಿತ್ತು ಮನ್ನಿಸಿಬರವಿತ್ತಲೇನೆಂದುಕೇಳ್ದಾ ॥ ೧ ॥ ಮುನಿನಾಥಕೇಳ್ ಬೆಂಟೆಗೆಂದೆನುತನಿಂದು ವನಕೆಬಂದವನಿಮ್ಮ ಪಾದವನಜ ದರ್ಶನದರ್ತಿಯಿಂ ಬಂದೆನೆನಲೆಂದಮಹಿಪಾಗೆಮುನಿವಂಶನಾಗಾ॥ ೨ ॥ ಧರಣೀಶಮಧ್ಯಾಹ್ನವಾಯ್ತೆನ್ನಗೃಹದೊಳು। ವಿರಚಿಸಿಭೋಜನವನ್ನು ತೆರಳುನಿನ್ನರಮನೆಗೆನಲೆಂದಮುನಿಪಾಗೆ ವರಕಾರ್ತವೀರ್ಯಭೂಮಿಪನೂ॥ ೩ ॥ ಇಹುದೆನ್ನ ಸಂಗಡಮುನಿವೃಂದಾಧಿಪಕೇಳು ಬಹುಪರಿವಾರವೀಗ ॥ ಗೃಹಕೆಪೋಗುವೆನೆಂದು ಪದಕೆರಗಲು ಪೇಳ್ದಮಹಿಪಾಗೆಮುನಿಪಾಲನಾಗಾ ॥೪॥ ಎನಿತುನಿನ್ನಯ ಕೂಡೆಪರಿವಾರವಿರ್ದಡೆ। ಜನಪಕೇಳೆನ್ನಾತೀಕ್ಷಣದೀ ॥ ಘನವೇಗಸ್ನಾನವನೆಸಗಿನೀಬಹುದೆಂದು ಮುನಿಪನಪ್ಪಣೆಯಿತ್ತಮುದದೀ ॥ ೫ ॥

ಭಾಮಿನಿ ॥ ಧಾರುಣಿಪತಿಮುನಿಪನಾಜ್ಞೆಯ ಧರಿಸಿನದಿಗೈದಿದನು ಸ್ನಾನವವಿರಚಿಸುತಲಿರನಿತರೊಳು ಬೋಜನಕೆಬಹುದೆಂದೂ॥

ಕರಸಿದನುಜಮದಗ್ನಿಯದನಾ ಅರಸಕೇಳ್ದಾಶ್ಚರ್ಯಗೊಂಡತಿ ತ್ವರಿ
ತದಿಂಬಲಸಹಿತನಡೆತರೆಮುನಿಪಕಾಣುತ್ತಾ ॥ ೧ । ಹರುಷದಿಂಕರ
ದೊಯ್ಯುತ್ತೆಲ್ಲರಿಗಾದೆ ವಿಷ್ಟರವಿತ್ತುಸರ್ವರು ಸ್ಮರಿಸಿದಿಷ್ಟಪದಾರ್ಥಗ
ಳಬಡಿಸಿದರುನಲವಿನಲೀ ॥ ಪರಿಕಿಸುತರಾಕಾವತೀಶನು ಬೆರಳಮೂಗಿ
ನೊಳಿಟ್ಟುತನ್ನಯ ಕರಣದೊಳಗಿಂತೆಂದು ನೆಲೆಮುನಿನಾಥಕೇಳೆಂದಾ

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅಹಹಿದೇನಾಶ್ಚರ್ಯವೆನ್ನಯ ಬಹಳಸೈನ್ಯಕೆ ನಿಮಿಷಮಾತ್ರ
ದಿವಹಿಲದಿಂದುಣಿಸಿದನು। ನೊಳ್ಪಿನುಮಹಿಯಮರನೂ॥೧॥ ಅರಮನೆ
ಯಉರುತರ ಪದಾರ್ಥವನೆರವಿಬಹುಶ್ರಮದಿಂದ ಸೂದರುವಿರಚಿ
ಸಿದಪಕ್ವಾನ್ನವೀಪರಿಯಿರದುರುಚಿಯೂ ॥ ೨ ॥ ಅರಿವೆನಾನೀವೋದ
ನಂಗಳು ದೊರಕಿತೆಂತೆಂಬುದನು ಕೇಳ್ವೆವರಯತಿಯನೆಂದೆನುತ ಬಂ
ದನುತ್ವರಿತದಿಂದಾ ॥ ೩ ॥ ಚರಣಕಮಲದೊಳೆರಗಲರಸನ ಶಿರವಪ
ಡಿದೆತ್ತುತಮನದೊಳು ಯಿರುವದೇನದಪೇಳೆನಲು ನೃಪನೊರೆದನಂ
ದೂ ॥ ೪ ॥ ರಾಗ ಕೇತಾರ ಗೌಳ ಅಷ್ಟತಾಳ

ಮುನಿಪಲಾಲಿಸುಕ್ಷಣಮಾತ್ರದೊಳೆನ್ನಯ ಯಿನಿತುಸೈನ್ಯ
ವನುನೀನೂ ॥ ವಿನಯದೊಳುಣಿಸಿದ ಪರಿಯಂತು ಪ್ರೇಮದೊಳೆನ
ಗದನುಸುರೆಂದನೂ॥ ೧ ॥ ಜನಪನೀಕೇಳಯ್ಯ ಯಜ್ಞವನಡಸೆಂದು
ಅನಿಮಿಷವಲ್ಲಭನೂ ಧೇನುವನಿತ್ತಿಹನದರಿಂದಲೀಪರಿದಿನ ನಿತ್ಯವ
ಹುದೆಂದನೂ ॥೧॥ ಅರ್ಜುನರಾಯಕೇಳುತಲೆ ಋಷಿಪಗೆಘ
ರ್ಜಸುತೆಂದನು ನಿರ್ಜ ರಪತಿಯಜ್ಞ ಕಿತ್ತಿಹನಿನಗೀಗಲರ್ಜುನಿಯ
ನ್ನುನೀನೂ ॥ ೩ ॥ ಸಾಮದಿಕೊಟ್ಟರೆವಳ್ಳಿತು ಯತಿಕೇಳುನಾಮತ
ಪ್ಪಿದಬಳಿಕಾ । ನಾಮಾಳ್ಪುದೇನು ದಂಡನೆನೃಪಧರ್ಮವು ಈಮುಹು
ರ್ತದಿಪಸುವಾ ॥ ೪ ॥ ಪಿಡಿದೊಯ್ವೆತಾನೆನೆ ಕೇಳುತ್ತಜಮದಗ್ನಿನು
ಡಿಯದಿರಲುಬಳಿಕಾ । ಪೊಡವಿಪಾಲಕಗೆ ಪೇಳ್ದಳುಮೃದುವಾಕ್ಯದಿಜ
ಡಜಲೋಚನೆನಗುತಾ ॥ ೫ ॥ ತೊರದುಕೋಪವಶಾಂತರೂಪನಾಗಿ

ಹನೆನ್ನ ಅರಸನೆಂದೀತೆರದೀ ॥ ಧರಣೀಶರಭಸವವಿರಚೀಸಿಕೆಡುವೆಕೇಳ್ ವರವಿಪ್ರದ್ರೋಹದಲೀ॥೬॥ ಬೆಡಗಿನವಾತನೆನ್ನೊಡನಾಡಬೇಡಿನ್ನು ನುಡಿಸಿದಾತನುದಾವನೂ ॥ ಪೊಡವಿಯೊಳಧಿಕಪ್ರಸಂಗವು ಯಾತಕ್ಕೆಜಡಜಾಕ್ಷಿಯರಿಗೆಂದನೂ॥ ೭ ॥ ಕೆಲಬಲದೊಳಗಿದ್ದ ಋಷಿಪರುಕ್ಷಾಣಾತ್ತ ಯಿಳೆಯಾಧಿಪತಿಗೆಂದರೂ ॥ ಚಲಬೇಡಬುಧರೊಳು ಬಾಡದ್ವೇಷದಿಬಲುಕೇಡು ನಿನಗಪ್ಪುದೂ ॥ ೮ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇನಿಬರೆಲ್ಲರು ಪೇಳ್ದನುಡಿಯನು ಜನಪಕೇಳದೆಕಾಮಧೇನುವಮನೆಗೆ ಒಯ್ದಪೆನೆಂಬ ಸಮಯದಿಘನತವಕದೀ ॥ ೧ ॥ ನಡದುಬಂದಾಕೋಪಮುನಿಪಗೆನುಡಿದುದೆನ್ನನುಸ್ವೀಕರಿಸಿನೀಕೊಡುನೃಪಗೆ ಶಾಪವವಮಹೀಶನಸುಡುವೆನ್ನೈಸೇ ॥ ೨ ॥ ಹಿಡಿದೆಯಾದರೆಚಲವನೆನ್ನಲಿಕೆಡುವದಿದಕೊಕಾರ್ಯದೊಡನೆನುಡಿದುನಾ ಮುನಿನಾಥಕ್ರೋಧಗೆಕಡುಹಿನಿಂದಾ ॥ ೩ ॥ ತುರುವನೊಯ್ಯಲಿ ಭೂಪಮೇಣಾತರಣಿಪಶ್ಚಿಮದಲ್ಲಿಮೂಡಲಿ। ಶರನಿಧಿಗಳೇಳುಂಬೆರೆತುಹೋಗಲಿ ತರಳನಿನ್ನಾವರಿಸುವೆನೆ ತಾನೆನಲುಖತಿಸರಿದನತ್ತನೃಪಾಧೇನುವ ಪುರಕೆತಾಕೊಂಡೊಯ್ದನಿತ್ತಲು ದುರುಳತನದೀ ॥ ೪ ॥ ಕಾಮಿತಾರ್ಥವನೀವಪಶುವನು ಭೂಮಿಪಾಲಕನೊಯ್ಯೆ ತನ್ನಯಹೋಮಕೆಡಲದಕಂಡು ಆಮುನಿಮನದಲಗಿದಾ ॥ ೬ ॥

ರಾಗ ನೀಲಾಂಬರಿ ರೂಪಕತಾಳ

ವಿನಮಾಡಲಿನಾನು ಯಜ್ಞವುಕೆಡುವುದಕಿನ್ನು ಧೇನುವನಪನಿಪತಿತಾನೊಯ್ದನುಛಲದೀ॥ ೧ ॥ ಯಾಗವನಡಸೆನುತ ಶತಯಾಗನುಪಶುವನುಕೊಟ್ಟಾ । ಯಾಗವಕೇಳಿದನಾಸುರನಾಗನೊಳೇನೆಂಬೇ ॥ ೨ ॥ ಧರಣಿಪನಾತನುವನದೊಳಗಿರುತಿಹ ಬಡವರುನಾವೈವರೆಯುವದಾರಿಗೇ । ದುಗುಡವಪರಿಹರಿಪರ್ಯಾರೂ ॥ ೩ ॥

ವಾರ್ಧಿಕ್ಯಾ ॥ ಈತೆರದಿಋಷಿಪಚಿಂತಾಕ್ರಾಂತನಾಗಿರಲ್‌ಭೂತನಾಥಜನಬಿಳ್ಕೊಂಡು ರಾಮಂತನ್ನ । ತಾತಮಾತೆಯರನೀಕ್ಷಿಪತವಕದಿಂ । ಬಂಧುಜನಕನಂಘ್ರಿಯೊಳುನಮಿಸೀ ॥ ಕಾತರಿಪತಂದೆಯಂ । ಕಂಡುಬೆಸಗೊಂಡ । ನಿನಗೇತರಿಂದಾದುದುದೀ ಚಿಂತೆ ಪೇಳೆಂದೆನಲ್ ಭೂತನಾಥಜನತೆಗದಪ್ಪಿದುಗುಡದಿ ಮುನಿಪಭಾರ್ಗವನೊಳಿಂತೆಂದನೂ ॥ ೧ ॥

ರಾಗ ಘಂಟಾರವ ಆದಿತಾಳ

ಮಗನೆಲಾಲಿಸಿಕೇಳುದುಗುಡದಪರಿಯಾ ॥ ನಗವೈರಿನಮಿತ್ರಪಶುವಾ ॥ ವಿಗಡದೊಳಿಂದು ಕೃತವೀರ್ಯಭೂಪನಮಗನೊಯ್ದು ಮಮಕರ್ಮ ನಷ್ಟವಾಯ್ತೆಂದಾ ॥ ೧ ॥

ಕಂದಪದ್ಯ ॥ ಜನಕನನುಡಿಯಂಕೇಳ್ದಾ ವನಜಾಂಬಕನತಿಕೋಪದಿಜಗಮುಂಸುಡುವಂದಿನಲಾ ಸ್ಮರಹರತಾಳಿದ ಘನಕೋಪಕೆ। ನೂರ್ಮಡಿಕಸಲುತೆಪಿತಗೆಂದಂ ॥ ೧ ॥

ರಾಗ ಪಂಚಗಾತಿಮಟ್ಟೆತಾಳ

ತಾತಲಾಲಿಸುಪೇಳ್ವಮಾತನೂ। ಭೂತಳೇಶನುಪಶುವನೊಯ್ದನೇ॥ಈತತ್‌ಕ್ಷಣಧರಣಿಪಾಲನಘಾತಿಸುತ್ತ ಲಿತರುವೆತುರುವನ್ನೂ ॥೧॥

ರಾಗಘಂಟಾರವಆ ದಿತಾಳ

ತರಳಲಾಲಿಸು ನೀನುದರಣಿಜಾತಾ । ದರಣಿಪತಿಯುತಿಬಲಯುತನೂ ॥ ಹರಕಮಲಜರಸಂಗರದೊಳು ಗೆಲುವನಲೆಕ್ಕಿಸದಿರುವೆ ನೀನೆಂತು ॥ ೧ ॥

ರಾಗ ಪಂಚಗಾತಿ ಮಟ್ಟೆತಾಳ

ಹರಿಹರಾದ್ಯರಾದುರದಿಗೆಲ್ದರೆ ಅರಸನೆನ್ನನೂ । ಜಯಿಸಲಾಪನೇ ॥ ತರಳಯೆನ್ನುವಚಿಂತೆಯಾತಕೇ । ಕರುಣೆಸಾಜ್ಞೆಯುತರಿವೆನೃಪತಿಯಾ ॥ ೧ ॥

ರಾಗ ಘಂಟಾರವ ಆದಿತಾಳ

ತನುಜನಿನೀತಕಿವನವಾಯೊಳುಳ್ಳ ಜನಪರುನೆನದಾಗನೃಪ ಗೇ ॥ ಘನಬೇಗಬಂದಳು ದೂರುವರೆನಲೆಂದ ವನಜಲೋಚನತನ್ನ ಪಿತಗೇ ॥ ೧ ॥

ರಾಗ ಪಂಚಗಾತಿ ಮಟ್ಟಿತಾಳ

ಹಲವುಗಜಗಳುಕೂಡಿ ಸಿಂಹನಾಗೆಲಲುಬಲ್ಲದೆ ಭೂಮಿಪಾ ಲರುಕಲಹಕೆನ್ನೊಳು ಕೂಡಿಬಂದರೆ ಕೊಲುವೆನವರನೂ ನಿಮಿಷ ಮಾತ್ರದೀ ॥ ೧ ॥

ರಾಗ ಘಂಟಾರವ ಆದಿತಾಳ

ತರಳಕೇಳ್ಮೊದಲೊಳು ಧರಣಿಪಾಲನೀನು ತರುವಸಾಮದಿ ಕೇಳಿಕಡೆಗೇ ॥ ದರಣಿಪಕೊಡದೀರೆನೆಗಳು ಯುದ್ಧವನೆಂದುಹರಸಿನೇ ಮವನಿತ್ತಧುರಕೇ ॥ ೧ ॥

ರಾಗ ಪಂಚಗಾತಿ ಮಟ್ಟಿತಾಳ

ಜನಕಚಿಂತೆಯತ್ಯಜಿಸು ನಿನ್ನಯತನಯನಧಟನು ನೋಡು ಕೊನೆಯಲೀ॥ ಮನುಮಥಾಂತಕಾದಿಗಳ ಚಿತ್ರಕೆಘನತರಾದ್ಭುತತೋ ಪೇಕಾಷ್ಟಕೇ ॥ ೧ ॥

ಭಾಮಿನಿ॥ ಜನಕನಾಜ್ಞೆಯಗೊಂಡುತನ್ನಯಜನನಿಯಲ್ಲಿಗೆ। ಬಂದವಳಪದವನಜದೊಳುತಲೆವಾಗಿರಲುನಂದನನತೆಗದಪ್ಪೀ॥ ವಿನ ಯದಿಂಕೇಳಿದಳು ನಿನ್ನಯಮನದಿ ರೋಷಾವೇಷತೋರ್ಪುದು । ಎನಗಿದೇನುಸುರೆನಲು ನುಡಿದನುಜನನಿಗಸುರಾರೀ ॥ ೧ ॥

ರಾಗ ಭೈರವಿ ಅಷ್ಟತಾಳ

ಜನನಿನೀಲಾಲಿಸೆನ್ನಬಿನ್ನಪವನ್ನುಮನುಜಪಾಲಕಧೇನುವಾ। ಮನೆಗೆತಾಪ್ರಸಭದಿಕೊಂಡೊಯ್ದುದನು ಕೇಳಿಘನಕೋಪಬಂತಿಂ

ದಿಶೀ ‖ ೧ ‖ ಅರಸುಗಳೇನ್‌ಗೈದರೂ । ಬೇಡೆಂಬರುಧರೆಯೊಳಾ ರುಂಟುಪೇಳೂ ‖ ತರಳನೀನತಿಖತಿಗೊಂಡು ಮಾಳ್ಪುದೇನೆನಲೆಂದ। ಹರಿತನ್ನಮಾತೆಯೊಳೂ ‖ ೨ ‖ ಕೃತವೀರ್ಯಪುತ್ರನನ್ನು । ಮಾ ರ್ಬಲಸಹಹತಗೈದುಧೇನುವನ್ನೂ ‖ ಅತಿಬೇಗನಿನಗೆ ತಂದೊಪ್ಪಿ ಸುವೆನುಕೇಳುಸುತನಸುಹಸುವನೀನೂ ‖ ೩ ‖ ಧರಣೀಶನುಧುರದಿಗೆ ಲ್ಲುವವೀರಸತ್ವವಿರಲುಧುರದಿ । ತರಿದೆಮ್ಮಧೇನುವ ತಹುದೆಂದು ನೇಮವಕರುಣಿಸಿದಳು ಮುದದೀ ‖ ೪ ‖

ಭಾಮಿನಿ

ಜನನಿಯಾಜ್ಞೆಯಧರಿಸಿ ಭಾರ್ಗವಮುನದೊಳತಿರೋಷವನು ತಾಳುತಜನಪತಿಯಶಿರವರಿವತವಕದಿಬಂದುತತ್ಪುರದಾ‖ ಕನಕಮಯ ಗೋಪುರದಬಳಿಯಲಿ । ಧನುವಜೇಂಗಯ್ಯಲು ಜಗತ್ರಯಮನದಿಕಳ ವಳಿಸಿದುದು ಭಯದಲಿದೇನಿದೇನೆನುತಾ ‖ ೧ ‖

ವಾರ್ಧಿಕ್ಯಾ ‖ ಧರಣಿಯಮರಶ್ರೇಷ್ಟಕೇಳಾನೃಪಾಲಕನಪುರ ದಿಬಹಳುತ್ಪಾತತೋರಿರ್ದವೇನೆಂಬೆ ಪರಿಕಿಸುತಲರ್ಜುನಂ । ಭಯ ದಿಂದಲ್ಯೆತಂದು । ಮಾತೆಯಂಕೇಳ್ದಡವನೂ ‖ ಒರದಳವಸಾನಸ ದ್ಯದಿಬಹುದು ನಿನಗೆಭೂಸುರದ್ರೋಹಮಂಮಾಡ್ದೆಹೋಗೆಂದುಜರೆ ಯಲವತಿರುಗಿ ಬಂದೋಲಗದೊಳಿರುತಿರಲ್ ಹರಿಯದೂತರ್‌ಬಂದು ನೃಪಗೆಂದರೂ ‖ ೧ ‖

ರಾಗ ಮುಖಾರಿ ಆದಿತಾಳ

ಕೇಳುಕೇಳಯ್ಯಪೇಳ್ವಮಾತ । ಕೃತವೀರ್ಯಜಾತಾ । ಕೇಳು‖ ಪಲ್ಲ ‖ ಧರಣೀಶನಾರ್ವಪೇಳ್ದಂತಿಹರೂ । ಮೇಣ್ನಾಕವಾಸಿಪುರ ವೆಲ್ಲ ನಿಮ್ಮಭಯಕಂಜಹರೂ ‖ ಉರಗದನುಜರ್ನಗಿದಿರೆನೀಬಿಡು ಧರಣಿಸುರನದೇಂಗೈವನೆನುತ ಪಶುಹರಣಗೈದರೆ ಬಿಡುವನೆಭಾ ರ್ಗವಧುರಕೆಬಂದಿಹನೇಳೆನ್ನು ತಚಾರರೂ ‖ ೧ ‖

ಭಾಮಿನಿ ॥ ಎನಲುನೂಕಿವನಾರು ಬಂದನೆಮುನಿಕುಮಾರ
ಕಸಂಗರಕೆಭಾಪಿನಿತುದಿನ ಬದುಕಿದಕೆಸಫಲತೆಯಾಯ್ತಲಾಯಂದಾ॥
ಜನಪನೀಕ್ಷಿಸಿಶಕ್ರಜಿತನೆಂದೆನಿಪ ಸೇನಾನಾಥಬಲಸಹಘನತವಕ
ದಿಂಬಂದನಾಕ್ಷಣಭಾರ್ಗವನಧುರಕೇ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಸೇನೆಸಹಿತಶಕ್ರಜಿತನೆನಿಪಸುಭಟನೂ ॥ ತಾನುಬಹಳಕೋ
ಪದಿಂದ ಧುರಕೆಬಂದನೂ ॥ ವೈನತೇಯಗಮನಪುರದಹೆ ೞರಗೆಧನು
ವನೂ। ಸಾನುಮಂತಬಿರಿವಪೋಲುಜಡಿಯುತೀರ್ದನೂ॥ ೧ ॥ ಅನಿ
ತರೊಳಗೆನೃಪನಸೈನ್ಯವೆಂಟುದೆಸೆಯೊಳು।ಧನುಜಕುಲವಿನಾಶನನ್ನು
ಮುತ್ತಿಕೊಂಡರೂ ॥ ಜನಪಮಥನಕಾಣುತಾಗಲಧಿಕರೋಷದೀ ।
ಇನಜಪುರದೊಳಿಟ್ಟನವರ ನಿಮಿಷಮಾತ್ರದೀ ॥ ೨ ॥ ದ್ವಜನಿಮ
ಡಿಯೆಕಾಣುತಾಗಳಧಿಕರೋಷದಿ । ಗಜರುತೆಂದಶಕ್ರಜಿತನಗಲುವೆ
ನಿಮುಷದೀ ॥ ದ್ವಿಜಕುಮಾರನೆಂದು ನಾವ್ರುತಡದರೆನ್ಮೊಳೂ। ಭುಜ
ಬಲವನುತೋರ್ದೆ ಭಳಿರೆನೆನುತಕ್ಷಣದೊಳೂ ॥ ೩ ॥ ತರಿವೆನೆನು
ತಲೆಸೆಯಲದನು ಮುರಿದುರಾಮನೂ ॥ ಒರದನೆಲವೊ ಖೂಳಪರಿಕಿ
ಸೀಗನಿನ್ನನೂ॥ ಸುರಪನೂರಪೊಗಿಪೆನೆನುತಲೊಂದುಕ್ಷಣದೊಳೂ ।
ತರಿದನವನನಬ್ಜನೇತ್ರನೊಂದುಶರದೊಳೂ ॥ ೪ ॥

ಭಾಮಿನಿ ॥ ವಾಹಿನಿಪತಿಮಡಿದಸುದ್ದಿಯು ಬಾಹುಸಾವಿರಬು
ಜಗೆಪೇಳೆಂದುಹರಿಯುತಾಕರದೋರ್ವ ಚಾರನಿಗರುಹಲವಬಂದೂ॥
ಹೇಹಯಗೆನಮಿಸುತ್ತ ಪೇಳಿದನಾಹವದಲೆಮ್ಮಯ ಚತುರ್ಬಲವಾ
ಹಿರನಪುರಕೈದಿದು ಭೃಗುರಾಮನಿಂದೆಂದಾ ॥ ೧ ॥

ಕಂದಪದ್ಯ ॥ ಚಾರನಾಡಿದನುಡಿಯ ಕೇಳುತಧರಣಿಪತಿಕೋ
ಪದಿಬಲಸಹಿತಭರದಿಂ ಸುರರಚ್ಚರಿವಡಲ್ಪರಿತಂದಂ ಧುರಕುರುಸಂಭ್ರ
ಮದಿಂದೇನುಸುರುವೆನದನಂ ॥ ೧ ॥

ವಾರ್ಧಿಕ್ಯಾ ॥ ರಿಪುವ್ರಾತಮಂತಮಸಸೂರ್ಯನೈತಂದರಿ ಪುನಿವ ಕಾಂತಾರದಾವಾಗ್ನಿಯೈತಂದ ನಿದೆರಿಪುಕಾದ್ರವೇಯ ಖಗ ರಾಜನೈತಂದನಿದೆರಿಪುದಂತಿಹರಿಬಂದನೂ ॥ ೧ ॥ ರಿಪುವೃಂದಕು ಲಶೈಲಕುಲಿಶನೈತಂದನಿದೆ । ರಿಪುಸರಿತ್ಪತಿ ಬಡಬಾಗ್ನಿಯೈಯ್ತಂ ದನಿದೆರಿಪುಮೇಘವಾಯುವ್ಯ ಬಂದನೆಂದೊದರಿದವು ಬಿಡದೆಕಹಳಾ ವಳಿಗಳೂ ॥ ೨ ॥

ಭಾಮಿನಿ॥ ಹರಿನೃಪಾಲರಥುರವನೀಕ್ಷಿಸೆ ನೆರದುದಂಬರವಾ ರ್ಗದಲಿ । ಹರಸರಸಿಜೋದ್ಭವ ಮುಖ್ಯತ್ರಿದಶರದೇನನುಸುರುವೆ ನೂ ॥ ಧರಣಿಪನಚತುರಂಗಸೈನಿಕ ಪರಿಪರಿಯ ಶರಮಳೆಯಕರೆವುತ ತರುಬಿದರು ಭೃಗುಕುಲನರಿಪುಲಕಾಲಭೈರವನಾ ॥ ೧ ॥

ರಾಗ ಭೈರವಿ ಏಕತಾಳ

ಧರಣೀಶನಸೇನೆಯನೂ ॥ ಹರಿಪರಿಕಿಸಿನಿಜಚಾಪವನೂ ॥
ತ್ವರಿತದಿಪಿಡಿದಾರ್ಭಟಿಸೀ ॥ ಶರವರುಷವಕರೆದುಹೂಂಕರಿಸೀ ॥೧॥
ಪರಶುಧರನಪದಹತಿಗೆ । ಬಲವೊರಗಿತು ನಿಮುಷದಿಧರೆಗೇ ॥ ನರಪ
ತಿಯದನೀಕ್ಷಿಸುತಾ । ಲತಿಕರದೊಳುಧನುವನುಕೊಳುತಾ ॥ ೨ ॥
ಉರುತರಕೋಪವತಳೆದೂ । ಜಗಥರಗೊಂಬೊಲ್ ಬೊಬ್ಬಿರಿದೂ ॥
ಶರಜಾಕ್ಷನನೀಕ್ಷಿಸುತಾ । ಹರಿಗೊರೆದನುಕಡುನಿಂದಿಸುತಾ ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳ

ಅರರೆವಿಪ್ರತರಳನೀನು ಧಾರಕೆಬಂದುನಮ್ಮ ಕೆಣಕಿ ಬರಿದೆ ಕೆಟ್ಟೆಯಂದು ಜರದನರಸನವನನೂ ॥ ತರಳನಾದರೇನು ಎನ್ನ ಶರ ಕೆತರಳತನಗಳಿಲ್ಲ ತರಣನಿರವತೋರ್ಪೆನೆಂದು ಜರದನೃಪನನೂ॥೧ ಮುನಿಕುಮಾರಕರನುಕೂಡಿವನದಿ ಕುಣಿವನೀನುಯುದ್ಧದನುವನೇನ ಬಲ್ಲೆಯಂದು ಜನಪವರ್ಯನೂ ॥ ಬಿನುಗುವಮಾತಲೇನುಫಲವು ಧನುವನಿತ್ತುಪಾದಕೆರಗು ಜನಕಸಾಕ್ಷಿಯಾಗಿ ನಿನ್ನ ತನುವನರಿವೆ

ನೂ ॥ ೨ ॥ ಪೊರವುಧೀರನಹುದು ನಿನ್ನ ಕರವಬಿಗಿದು ಶರೆಯೊಳಿಡುವೆ। ಪರಿಕಿಸೆನ್ನ ಪರಿಯನೆಂದಹರಿಗೆಭೂಪನೂ ॥ ದುರುಳನಿನಗೆ ಸುರಪನೂರಿನೊಳಗೆ ಗ್ರಹವತ್ವರಿತದಿಂದಲೀವೆನೆಂದ ಪರಶುರಾಮನೂ॥ ೩ ॥ ಸುರಪಮುಖ್ಯರೆಲ್ಲ ಹೆಸರವೊರದರಂಜುತಿಹರುನಿನಗೆ। ತರಳನೆನ್ನ ಸತ್ವದಿರವ ಸರಿಯೆಯೆಂದನೂ ॥ ಕುರಿಯುಮರಿಯುಸುದೆದದಂತಿಭರದಿಸಿಂಹಗಂಜಲುಂಟೆ । ಸುರರನೀನುಗೆಲಿದರೆನಗೆ ತರವೆಯಂದನೂ ॥ ೪ ॥ ಯತಿಕುಲೇಂದ್ರನೆನಿಸಿದ ತ್ರಿಸುತನವರದಬಲದಲೆನಗೆ । ಕ್ಷಿತಿಯೊಳಿಂದುತುಲ್ಯರಿಲ್ಲ ಸುತಸಮೂಹದೀ ॥ ಕ್ಷಿತಿಯಮರಠಗೆಲ್ವಬಲುಹುಯತಿಪನಿನಗೆ ಕೊಟ್ಟದುಂಟೆ। ಮತಿವಿಹೀನನೀನುಧರಣಿಪತಿನಿಕಾಯದೀ ॥ ೫ ॥ ಕರಟವನ್ನು ಭೇದಿಸಲ್ಕೆಸುರಪಪಿಡಿವವಜ್ರವೇಕೆ ತರಳನಿನ್ನ ಪೊಯ್ಯೆರುಷಿಯವರವಿದೇತಕೇ ॥ ದುರುಳಕೇಳುಪಾಪಯುತನೆಪಿರಿದು ಸತ್ವನಾದರೇನು ದೊರವುದಲ್ಪನಿಂದಧರೆಯೊಳೇತಕೇ ॥ ೬ ॥ ಪೊಡವಿಯಮರಜಾತನೀನು ನುಡಿಗಳಲ್ಲಿ ಧೀರನಹುದು ತುಡುಕುಧನುವನಲ್ಲದಿರಲು ನಡೆಯೊಸದ್ಮಕೇ ಪೊಡವಿಪಾಲಕೇಳು ಪಶುವಕೊಡಲು ಮನೆಗೆಪೋಪೆನಾನು ಪಿಡಿವನಲ್ಲದಿರಲುಧನುವನಡಿಸುಶೀಘ್ರದೀ ॥ ೭ ॥

ಭಾಮಿನಿ ॥ ರಾಮನಾಡಿದನುಡಿಯಕೇಳ್ದಾ ಭೂಮಿಪತಿಕಡುಗನಲಿಶಸ್ತ್ರಸ್ತೋಮವೃಷ್ಟಿಯಕರದನಂದಾ ಭಾರ್ಗವನಮೇಲೇ ॥ ಕಾಮಪಿತನದನೆಲ್ಲ ಖಾಡಿಸುತಾ ಮಹೀಶನಯುಸೆಯಲಗಣಿತ ಸ್ತೋಮರಗಳುರದೊಳಗೆಪೊಕ್ಕೈದಿದವುಬೆನ್ನಿನಲೀ ॥ ೧ ॥

ರಾಗ ಪಂಚಗಾತಿ ಮಟ್ಟೆತಾಳ

ಹರಿಯಬಾಣಹತಿಗೆ ನೊಂದುಕಾರ್ತವೀರ್ಯನೂ ॥ ಉರಿವಕೋಪದಿಂದ ಪರಶುಧರನೊಳೆಂದನೂ॥ಧರಣಿಯಮರತರಳನೆಂದು ತಡದರೆವ್ಮೊಳೂ। ಭರಿತಕಡುಹದೋರ್ದಭಳಿರೆ ನಿನ್ನ ಕ್ಷಣದೊಳೂ॥

ತರಿವೆನೆನುತಅದ್ರಿಶರವನೆಸೆಯೆಲದರನೂ ॥ ಧರಣಿಧರನುತರಿವುತಗ್ನಿ
ಶರದೊಳೆಚ್ಚನು ॥೧॥ ಅರಸನದನುವರುಣಬಾಣದಿಂದಭೇದಿಸೀ ।
ಹರಿಯುನುರಗಶರದೊಳೆಚ್ಚಜರೆದುಗರ್ಜಿಸೀ ॥ ಗರುಡಬಾಣದಿಂದಶ್ರೀ
ಶನದರಕಡಿಯಲೂ ॥ ಧರಣಿಪಾಲಕನಲು ತೆಚ್ಚವಿವಿಧಶರದೊಳೂ ॥
ಪರಮಪುರುಷನದನು ಕಡಿಯೆಮುಳಿದುಭೂಪನೂ ॥ ಸರಸಿಜೋದ್ಭ
ವಾಸ್ತ್ರದಿಂದೆಚ್ಚಹರಿಯನೂ ॥ ಪ್ರತಿಪಿತಾಮಹಾಸ್ತ್ರದಿಂದ ಶ್ರೀಶತ
ರಿಯಲೂ॥ ಯತಿಕುಲೇಂದ್ರನಿತ್ತರೌದ್ರಶರವಖತಿಯೊಳೂ ॥ ಖತಿಯೊ
ಳೆಸೆದುಬರುವಶರವವಿಷ್ಣುವೀಕ್ಷಿಸೀ ॥ ತರಿದುದಿವ್ಯಬಾಣದಿಂದನೃಪನ
ಕರವನೂ॥ ಧರಣಿಗುರುಳಲೆಚ್ಚನೇನೆಂಬೆಸುಧಟನೂ ॥ ಮರಳೆನಿಮಿಷ
ಮಾತ್ರದೊಳಗೆ ಕರಗಳುದಿಸಲು । ಪರಶುರಾಮಮುಗುಳೆ ಕರವಕಡಿದ
ಭರದೊಳೂ ॥ ೩ ॥

ಭಾಮಿನಿ ॥ ತರಿವುತಿರ್ದನು ಪರಶುಧರನಾಧರಣಿಪಾಲನಕರ
ವಸುರರಚ್ಚರಿವಡಲುಚಿಗುರುತ್ತಲಿರ್ದುದದೇನನುಸುರುವೆನೂ ॥ ಹರಿ
ಯದನುಪರಿಕಿಸುತಬೆರಗಾಗಿ ಅರೆಮುಷಮೈಮರೆದ ವೋಲಿರೆಪರಿಕಿಸು
ತಲಾಕಾರ್ತವೀರ್ಯನು ಶ್ರೀಶಗಿಂತೆಂದಾ ॥ ೧ ॥

ರಾಗ ಭೈರವಿ ಅಷ್ಟತಾಳ

ಎಲವೊಭಾರ್ಗವನೆಕೇಳೋ ! ಮುನಿಸಿಂದಜಲಜಭವಾದಿಗ
ಳೂ । ಕಲಹಕ್ಕೆಬಂದರೆ ಸದವೆನಿನ್ನಯುಪಾಡೆತಲೆ ಮಾತ್ರಕಡೆಯಿಾ
ಗಲೂ ॥ ೧ ॥ ತರಿವೆನೆನುತಅಸ್ತ್ರವಾ । ಸುರಿಯಲದಪರಿಕಿಸುತಲಿ
ಮಾಧವಾ॥ ಕರಗಳಕಡಿಯಲಾಕ್ಷಣ ಮತ್ತೆಚಿಗುರಿತು । ಸುರರುಕಂ
ಡಚೋದ್ಯವಾ ॥ ೨ ॥ ಬೆರಗಾಗಿವಾಯುವನೂ । ಕಳುಹಲವಧರೆಗೆ
ಬಂದಾಭೂಪನೂ ॥ ಅರಿಯಾದವೋಲ್ ರಾಮನೆಡೆಗೈತರಲ ದಪ
ರಿಕಿಸಿಹರಿಕೇಳ್ದನೂ ॥ ೩ ॥

ಭಾಮಿನಿ ॥ ಸುರನೊಮನುಜನೊದೈತ್ಯನೊ । ಮೇಣುರಗ
ಕುಲಜನೊ । ನಿನ್ನನಾಮವನೊರವದೆನಗೆ ನಗುತನುಡಿದನು ಮ

ರುತಶ್ರಿಹರಿಂಗೇ ॥ ಅರಸನುದರದಿಸುಧೆಯಿಹುದು ತೆಗೆಕರೆವುದೀತಂಗೆ ನಲುಹರಿತಾಸರಸಿಜಾಕ್ಷಾಸ್ತ್ರವನು ಪೂಣ್ಣಾಜನಪಗಿಂತೆಂದಾ ॥೧॥

ರಾಗ ಕೇತಾರ ಗೌಳ ಅಷ್ಟತಾಳ

ಅರರೆಭೂಪಾಥಮಲಾಲಿಸೂ । ನಿನ್ನ ಯಕರಜಗುರುವದೆನ್ನುತಾ । ಸ್ತ್ರಿರಗರ್ವಬೇಡತೋರ್ಪೆನುನೋಡುವೈಷ್ಣವಶರದಬಹಳಸವಿಯೂ ॥ ಯನಲೆಂದ ನೆಲವೊಭಾರ್ಗವಕೇಳೂಗರ್ವದಿ ಮನಕೆ ಬಂದಂತೆ ನೀನೂ ॥ ತೊನೆದರೆಫಲವೇನು ನೋಡೆನುತಸ್ತ್ರಾಘವನು ಭೂಪ ತೆಗದೆಸೆಯೇ ॥ ೨ ॥ ತರಿವೃತ್ತಲಾಬಾಣನಿಚಯವ ವೈಕುಟುಂಬ ಶರದಿಂದನೃಪನುರದೀ ॥ ಯಿರುವಸುಧಾಕಲಶವತೆಗೆಯುತಕೊಂಡು ಪರಶುವರೋಷದಲೀ ॥ ೩ ॥ ತಿರುಹುತ್ತಬಿಡೆ (ಭೂಮಿಪನ) ಕೋಪದಿಂದಭೂಮೀಶನ ಕರಸಾವಿರಂಗಳನ್ನು । ತರಿವುತರಾಮನಾಜ್ಞೆಯೊಳು ಛೇದಿಸಿದುದು ಅರಸನಮೂರ್ಧ್ನವನೂ॥ ೪ ॥

ವಾರ್ಧಿಕ್ಯಾ ॥ ಪರಶುಹತಿಯಿಂದವನಿಪಾಲನ ಶಿರಗಗನಕಿರದೆಚಗಿದಿಳೆಗೆ ಕೆಡಹಲ್ಕೆಧರ್ಮವಾಸುರದವರ ಸುಧಾಕರಬಿಂಬದಂತಂದಂ । ಪರಿಕಿಸುತಸುರರರಲ ಮಳೆಗರದರೂ ॥ ಧುರದೊಳಗೆ ವಡೆಯನವಸಾನಮಂ ಪರಿವಾರದವರದಕಂಡು ದೆಸೆಗೋಡಿದರ್ ಧನುಜರಾಮರುಗಿ ಭಯದಿಂದವನಮಂ। ಪೊಕ್ಕರಾಪುರದ ಜನನಡುಗಿತೂ॥೧॥

ಭಾಮಿನಿ ॥ ಭೀತರಿಂಗಭಯವನುಕೊಡುತಾ । ಭೂತನಾಥಪ್ರಿಯನು ಪಶುವನಾಪುರುಹೂತಗುಣೆದೆನೆನಲು ನುಡಿದನುನಗುತ ಮುನಿನಾಥಾ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ತರಳಕೇಳೈ ಪಶುವನಾಮದಿ ಧರಣಿಪಾಲಕಕೊಟ್ಟನೊನೀ ದುರುಳನಾತನಜ್ಯೆಸಿತಂದೆಯೊಳರುಹಿಸೆನಲೂ॥ ೧ ॥ ಒರದನೆಲೆಪಿತ ಕೇಳು ಯುದ್ಧದಿಶಿರವನರಿದಾಭೂಮಿಪಾಲನ ತುರುವತಂದೆನೆನುತ್ತ

ಪಾದಕೆಮರಳಿಮಣೆಯೇ ॥ ೨ ॥ ಹರುಷದಿಂಮುನಿನಾಥ ತನ್ನಯತ ರಳನನು ತೆಗೆದಪ್ಪಿಮುದ್ದಿಸೆ । ಭರದಿರೇಣುಕೆಪುತ್ರಿಯಲ್ಲಿಗೆ ಪರಶು ಧರನೂ ॥ ೩ ॥ ಬಂದುಪಾದದೊಳೆರಗೆ ಕಾಣುತನಂದನನ ತೆಗದ ಪ್ಪಿಮುದ್ದಿಸಲೆಂದನಾನಿಜ ಮಾತೆಗರಸನಕೊಂದಪರಿಯಾ ॥ ೪ ॥

ರಾಗ ಮಧು ಮಾಧವಿ ತ್ರಿವುಡೆ ತಾಳ

ಮಾತೆನೀಲಾಲಿಸಿಕೇಳುಬಿನ್ನಪವಾ। ಭೂತಳೇಶನಸೀಳಿನಮ್ಮ ಯಪಶುವತಾತಂಗೆ ತಂದೊಪ್ಪಿಸಿದೆನೋಡುನಿನ್ನ । ಜಾತನಸಹಸ ವನೆನಲುನಂದನನಾ ॥ ೧ ॥ ಬಿಗಿದಪ್ಪಿಪೇಳ್ದಳು ಮೂರುಲೋಕ ದೊಳೂ ॥ ವಿಗಡನಾತನಗೆಲ್ದೆಯಂತು ಯುದ್ಧದೊಳೂ ॥ ನಗವೈರಿ ಮುಖ್ಯರಗೆಲ್ದಾತನವನೂ ॥ ಮಗುನೀನಿದಾಶ್ಚರ್ಯವೆನಲೆಂದನವ ನೂ ॥ ೨ ॥ ಪರಿಪರಿಶಸ್ತ್ರದೊಳಗೆಚ್ಚನದನೂ ॥ ಪರಿಹರಿಸಲಾನು ತರಿದೆಬಾಹುವನೂ ॥ ಮರಳಿಜನಿಸಲದಕಂಡು ಮಾರುತನೂ । ಅರು ಹಿದಮರ್ಮವತರಿದೆಭೂಪನನೂ ॥ ೩ ॥

ಭಾಮಿನಿ ॥ ಮನದಿಹರುಷವತಾಳಿರೇಣುಕೆತನುಜನನು ಬಿಗಿ ದಪ್ಪುತೆಂದಳು। ನಿನಗೆಸರಿ ಯಿಾಜಗದಿಲಿನ್ನಾರುಂಟು ಭೂಮಿಪರಾ॥ ದಿನಪನಂದನನೂರಿಗಟ್ಟಿದೆ ಘನಪರಾಕ್ರಮಿನೀ ನೆನಲುಹರಿಜನನಿಗೆ ರಗಿದ ನಿನ್ನದಯವಿರಲಾವುದರಿದೆಂದೂ ॥ ೧ ॥

ವಾರ್ಧಿಕ್ಯಾ ॥ ಸುತಸಹಿತಲತ್ರಜಮದಗ್ನಿ ತೋಷದೊಳಿರಲ್ ಕೃತವೀರ್ಯಜಾತಸಂಭವರತ್ತ ಮನದೊಳಗೆ ಪಿತನಳಿದರೋಷದಿಂ ದಾಲೋಚಿಸಿದರೊಂದುದಿನ ಭಾರ್ಗವಜನಕನಾ ॥ ಹತಗೈಯಬೇ ಕೆಂದುಚಿತ್ತದೊಳ್ ನಿಶ್ಚೈಸಿಶತದಳಾಂಬಕ ನಿಲ್ಲದಿಹ ಸಮಯಮಂ ಹುಡುಕುತಿರ್ದುಮರ್ಮಂತ್ರಿಗಳಿರಲ್ಕೊಂದುದಿನಕುಶಕೆಂದು ರಾಮನವ ಕೈದಿರ್ದನೂ ॥ ೧ ॥

ರಾಗ ಸುರಟಿವಿಕತಾಳ

ಏನನೆಂಬೆನ್ಯೆಯ್ಯಾ ॥ ಮೋಸವನೇನನೆಂಬೆನ್ಯೆಯ್ಯಾ ॥ ದಾನವಮರ್ದನನಿಲ್ಲದ ವ್ಯಾಳ್ಯಮಾನವಪಾಲಕಪುತ್ರರು ಮಾಡ್ದುದಾ। ಹರಿಯುಮನೆಯೊಳಿಲ್ಲಯಂಬುದನರಿದು ಸಹಜರೆಲ್ಲಾ। ಭರದಿರುಷೀಯೌಪಾಸನವನು ವಿರಚಿಪಸಮಯದಿ ನಡೆತಂದರೂ ॥ ೧ ॥ ಈತನೆಮ್ಮಪಿತನ ಕೊಂದವನತಾತನಿಂದಿಲಿವನಾ। ಘಾತಿಸಬೇಕೆಂದಳುಕದೆ ರುಷಿಪನಆಯುಧದೊಳು ಕೊಯ್ದರುಶಿರವನೂ ॥ ೨ ॥

ಭಾಮಿನಿ ॥ ಅರಿದಶಿರವನುಕೊಂಡು ತೆರಳಿದರತ್ತಲಿತ್ತಲು । ತರುಣಿರೇಣುಕೆಯದನು ಕಾಣುತಪತಿಕಳೆವರದೀ ॥ ಹೊರಳಿದರುಹಾಕಾಂತಾಹಾಭೂಸುರಕುಲಾಗ್ರಣಿಮಾತನಾಡ್ಯೆ ಭರಿತಮೌನವಿದೇಕೆ ಹೇಳೆಂದನುತಹಲುಬಿದಳೂ ॥ ೧ ॥

ರಾಗ ಕೇದಾರ ಗೌಳ ಆದಿತಾಳ

ಹರಹರಾಮದ್ರಮಣಾ । ನಿನ್ನದುರುಳರೀರೀತಿಯೊಳೂ । ತರಳಭಾರ್ಗವ ನಿಲ್ಲದಾಗತರಿದೂ । ಪೋದರ್ಯೆಯ್ಯೊ ॥ ೧ ॥ ಮಾತೊಂದಾಡಬಾರದೇಕೆ । ಖತಿಯೆನ್ನೊಳೇಕೇ । ವೀತಿಹೋತ್ರನಹುತಿಯನ್ನೂ ॥ ನೀತಳುವದೀಯೋ ॥ ೨ ॥ ಯತಿಗಳ್ಯೆತಂದಿಹರೂ ನೀನು ಅತಿಥಿಸತ್ಕಾರವನೂ ॥ ಸತತವಿರಚಿಪಂತೆ ರಚಿಸುಪತಿಯೆನಿದ್ರೆತ್ಯಜಿಸೂ ॥ ೩ ॥ ಬಂದುನಿನ್ನಸಮುಖದೊಳ್ । ನಿಂದುನೃಪರವಧೆಗೇ । ಕಂದರಾಮಗೇಳ್ದಾನಿಂದು ನೇಮವೀಯ್ಯೊ ॥ ೪ ॥

ಭಾಮಿನಿ ॥ ತರುಣಿಮರಗುವದ್ವನಿಯ ಕೇಳುತನೆರದರುಷಿಗಣಪರಿಕಿಸುತಲಾ ತರುಣಿಯನುಪಿಡಿದೆತ್ತಿಹಾಹಾರಾಮಹಾಯನುತಾ ॥ ಮೊರೆಯಿಡಲ್ಕಾದರವಕೇಳುತ ಮುರಹರನು ಶೀಘ್ರದಲಿಮಾತೆಯಬಳಿಗೆಬಂದಾ ಪಿತನಪರಿಯನು ನೋಡಿಹಳವಿಸಿದಾ ॥ ೧ ॥

ರಾಗ ಸಾವೇರಿ ಏಕತಾಳ

ಹರಹರಪಿತನಿನ್ನ! ನಾನಿಲ್ಲದಾಗದುರುಳಹೈಹಯಭೂಪನಾ।
ತರಳರರಿದುಪೋದರೇ । ಕಂಗಳನೀನುತೆರದೆನ್ನ ನೋಡಬಾರದೇ॥೧॥
ತರಿವೆನಿಮಿಷಮಾತ್ರದಿ। ಸಂಗರದೊಳು । ನರಪತಿಗಳನಿಂದಿರಿಸೇ॥
ಹರಸಿನೇಮವನೆನಗೆನೀನಿತ್ತು ಯುದ್ಧಶಿರದೆಕಳುಹುತೋಷದೀ॥೨॥
ಭಾಮಿನಿ ॥ ಈಪರಿಯಮರುಗುವಮುರಾರಿಗೆ ತಾಪಸರುಪೇ
ಳಿದರು ಕೇಳೈಸುರಪತಿಗೆಪತಿನೀನು । ನರನೇಮರುಗಲೇಕಿನ್ನೂ ॥
ಕೋಪವೆಗ್ಗಳಿಸದುದುಕಲ್ಪದತ್ರೈಪುರಾರಿಯ ವೋಲ್ಗಜರಿನಿಜಚಾಪಶ
ರವನುಕೊಂಡುತನ್ನಯಮಾತೆಗಿಂತೆಂದಾ ॥ ೧ ॥

ರಾಗ ಮಾರವಿ ಏಕತಾಳ

ಬಿಡುಬಿಡುಶೋಕವತಾತನ ತಲೆಯನುಪೊಡವಿಪನಂದನೂ ।
ಕಡಿದೊಯ್ದರೇನಾಯಿತು ನೇಮವನೀನುಕೊಡುಕೊಡು ಶೀಘ್ರದೊ
ಳೂ ॥ ೧ ॥ ತರಿದುಮಹೀಶರನೆನ್ನಯ ಜನಕನಶಿರವನು ತಂದೀಗಾ॥
ಬರಿಸುವೆಜೀವವನೆನೆಖತಿಯೊಳು ಮಗಗೊರೆದಳಬಲೆಯಾಗಾ ॥.೨ ॥
ಜನಪತಿಗಳಸಕಲಾವನಿಯೊಳಗಿಹ ಜನಪದದೊಳುಹೊಕ್ಕೂ ॥ ೨ ॥
ದಿನಪಜಪುರವನು ಕಾಣಿಸುಗಿರಿಗುಹೆ ವನವಕಡೆಯೊಳರಸೂ ॥ ೩ ॥
ಮಾತುಳನೆನಗಿವನಾತನು ಭಾವನುಈತಮೈದುನನೆನುತಾ ॥ ನೀತಿವಿ
ಹೀನರಬಿಡದಿರು ಬಾಹುಜಜಾತಿಯಿವರಜಾತಾ ॥ ೪ ॥ ಕ್ಷಿತಿಪಾಲರ
ಶೋಣಿತದೊಳು ನಿನ್ನಯಪಿತಗೆತರ್ಪಣವನೀಡೂ ॥ ಸತಿಯರುಗ
ರ್ಭವತಾಳಿರಲವರನು ಕೃತಬುಜರೊಳುಕೂಡೂ ॥ ೫ ॥ ಅರಸರ
ಕಂಠದಚೌಡಿಕೆಭೂಮಿಶ್ವರದಂತದಸರವಾ ॥ ವಿರಚಿಸಿಕೊಂಡೆನ್ನಯ
ಸನ್ನಿದಿಗೈವದುವದು ಮಗನೆನೀಬೇಗಾ ॥ ೬ ॥ ಪತಿಯಕಳೇಬರಸಹಿ
ತಲತ್ರಿಯಸುತನಾಶ್ರಿಮತಾನೀಗಾ । ವೃತದಿಂದೆನ್ನನುಮೈದಿಡು
ಭೂಪರಮಥಿಸುಕಡೆಗೆಬೇಗಾ ॥ ೭ ॥

ಭಾಮಿನಿ ॥ ಜನನಿಯಾಜ್ಞೆಯು ಶಿರದಲಾಂತಾವನ ಜಲೋಚ
ನಭಾರಯಷ್ಟಿಯು ಘನತವಕದಿಂದೆಸಗಿ ಕೊಂಪೊಯ್ದ್ದುಸೆಯಲ್‌ನಿಜ
ಪಿತನಾ ॥ ತನುವಸರಸುತಲೊಂದುಕಡೆಯಲಿ । ಜನನಿಯನುಕಳ್ಳಿರಿ
ಸಿತಂದನುಮುನಿಪದತ್ತಾತ್ರೇಯನಆಶ್ರಮಕೊಂದುದಿವಸದಲೀ ೧॥
ಅತ್ರಿಸುತನಾಶ್ರಮದಿಮಾತೆಯು ಕ್ಷತ್ರಿಯಾಂತಕನಿರಿಸಿ ಭರದೊಳು
ಶತ್ರುಭೂಪರತರಿವತವಕದಿ ಬಂದುತತ್ಪುರದಾ ॥ ವೇತ್ರಧಾರಕರಿಂ
ಗರುಹೆ ನೃಪಪುತ್ರರಿಂಗರುಹಿದಾ ತಕ್ಷಣಶತ್ರುವನುತೋರೆನುತ ಪೊ
ರಟರುಕೂಡೆಸಂಗರಕೇ ॥ ೨ ॥

ರಾಗ ಪಂಚಗಾತಿ ಮಟ್ಟೆತಾಳ

ಸೇನೆಸಹಿತಧುರಕೆ ಕಾರ್ತವೀರ್ಯಪುತ್ರರೂ । ಭಾನುದತ್ತ
ಮುಖ್ಯವಧಿಜವದಿಬಂದರೂ ॥ ದಾನವಾರಿಯದನು ಕಾಣುತವರಬಲ
ವನೂ ॥ ಬಾನುಸುತನಪುರಕೆ ಕಳುಹಿನೃಪರಿಗೆಂದನೂ ॥ ೧ ॥ ವನಕೆ
ನಾನುಪೋದವ್ಯಾಳ್ಯದೊಳಗೆನಮ್ಮಯಾ ॥ ಜನಕನನ್ನುಕೊಂದುಶಿರ
ವತಂದೆನಿಮ್ಮಯಾ ॥ ಅನುತನುಜಬಂಧು ಮಿತ್ರವರ್ಗಸಹಿತದೀ ॥
ಇನಜಗೀವೆನೆನುತಲೆಚ್ಚನು ರುತರಾಸ್ತ್ರದೀ ॥ ೨ ॥ ಧರಣಿಯಮರತರ
ಳಕೇಳುವ್ಯರ್ಥಧುರವನೆಸಗಿಕೆಟ್ಟೆ ನಿನ್ನತರಿವೆಕ್ಷಣದೊಳೂ ॥ ಪರಿಕಿಸೆ
ನುತಭಾನುದತ್ತಸರಳಸುರಿಯಲೂ ॥ ತರಿದರಾಮನವನ ಶಿರವನ್ಯೆದು
ಶರದಲೀ ॥ ೩ ॥

ವಾರ್ಧಿಕ್ಯ ॥ ಧರೆಯಮರಕೇಳ್‌ಭಾನುದತ್ತ ನಿಳೆಗುರುಳಲ
ದಪರಿಕಿಸುತಲಾಯು ತದ್ವಜಕಾಲಜಂಘಾಖ್ಯರಿರದೇ ॥ ಕಂಗೆಟ್ಟೋಡಿ
ದಭೀಯದೊಳಳಿದುಳಿದರಂ ಶಿರವನರಿದಾರಾಮನೂ ॥ ಭರಿತವ್ಯಾಕೇ
ಸುದ್ದಿ ಧರೆಯೊಳಾಹವಕೆಂದು ನೆರದಗಣಿತಹೇಹಯಾನ್ವಯದ ರಾಯ
ರವದಿರನೆಲ್ಲರಂ ತರಿದುಮಿಕ್ಕಭೂಪರಪುರ ಬಂದಲ್ಲಿರುವರಾಯರಾ೧॥
ಸುರಪುರಕೆಪಯಣಮಂಗೈಸಿ ಗಿರಿಗುಹೆವನವನಸರಸೀ ಕಂಡರಸರಸಂಹ

ರಿಸಿಭೂಮಿಯೊಳ್ಭರದಿಸಂಚರಿಸು ತಿಪ್ಪತೊಂದು ಸೂಳಿಂದ ನಿಕ್ಷತ್ರಮಯವಿರಚಿಸೀ ॥ ಉರಗಲೋಕದೊಳಾವನಾದರಂ । ಪೋಗಿರಲ್ ತರಿವೆನಾತನನೆನುತ ನಾಗಲೋಕಕೆಬರಲ್ ಹರಿಯಬರಮಂಕಂಡು ಚಾರನೊರ್ವಂಬಂದು ಮಹೇಶಗಿಂತೆಂದನೂ ॥ ೨ ॥ ಅವಧಾನಜೀಯಸಮ್ಮಿಪೊಳಲಪೊರಗೆ ಮಾಧವಬಂದನಿದೆನೋಡೆನಲ್ಕೇಳು ತುತ್ಸಹದೊಳವನೀಧರಂ ಸಕಲಪರಿವಾರಸಹಿತಿದಿರ್ಬಂದು ಕರದೊಯ್ದು ಹರಿಯಾ ॥ ದ್ರವಿಣವಿಷ್ಟರದಮೇಲ್ಕುಳ್ಳಿರಿಸಿ ಭಕ್ತಿಯಂವಿವಿಧೋಪಚಾರಮಂಗೈದು ಬಲುಚಿಂಹೆಯಿಂದ್ರುವರೂಪನಂಹೊಗಳಿ । ಕಾದ್ರವೇಯಾಧೀಶನಚ್ಯುತನೊಳಿಂತೆಂದನೂ ॥ ೩ ॥

ರಾಗ ಕಾಂಬೋದಿ ಜಂಪೆತಾಳ

ಪರಶುಧರಕೇಳ್ತವ ಪದಾಬ್ಜದರುಶನದಿಂದ ಹರಿದುದಘನಿಕರನಿಯನ್ನ ॥ ಪುರಕೆಬಿಜಯಂಗೈದುದೇನು ಪೇಳೆನಲೆಂದನುರಗರಾಜನಿಗೆ ಘನವರ್ಣಾ॥ ೧ ॥ ಧರಣಿಪರವಂಶವನು ಸವರೆಂದುಮಮಮಾತೆ ಕರುಣಿಸಿದಳಾಜ್ಞೆಯನುನಾನಾ ॥ ಧುರದಿಮಲತನೆಲ್ಲತರಿದು ಭಯದಿಂದಡಗಿಹರನರಸಲೈತಂದೆಕೇಳೂ ॥ ೨ ॥ ಹರಿರಾಜನೆಂದನರ ಹರಿಕೇಳು ಮನುಪುರಕೆಧರಣಿಪರು ಬಂದಿಲ್ಲವೆನಲೂ ॥ ಮುರಮಥನಪೇಳ್ದನಿನಗರಿಗಳೀಗಿರಲವರನಾತರಿವೆನುತ ರಾಮತೋಷದೊಳೂ॥ ಸಾವಿರಾನನಪೇಳ್ದನಂತಕನ ದಿಕ್ಕಿನೊಳುರೇವಿಕೊಂಡಿಹರಸುರರವರಾದೇವನಪುರಕೆಪೋಗೆನಲು ಹರಿಶ್ರಾದ್ಧದೇವಪುರ ಕಟ್ಟಿದನುಖಳರಾ॥

ಭಾಮಿನಿ ॥ಮುನಿಪಕೇಳಾಶೇಷರಾಜನ ವಿನಯದಿಂಬೀಳ್ಕೊಂಡುತನ್ನಯಜನನಿಯಲ್ಲಿಗೆ ಬಂದುತಾತನದೇಹದೊಳುಶಿರವಾ॥ ಘನತವಕದಿಂದಿಟ್ಟು ಕುಂಡಿಯುವನವತಳಿಯಲು ಮುರಹರನಪದವನಜವನುಧ್ಯಾನಿಸುತ ಕಣ್ದೆರೆದೆದ್ದನಾಕ್ಷಣಕೇ ॥ ೧ ॥

ರಾಗ ಕೇದಾರ ಗೌಳ ಝುಂಪೆತಾಳ

ಜಮದಗ್ನಿಯೇಳಲದನೂ । ಪರಿಕಿಸುತಸುಮನಸರುಹೂಮ

ಳೆಯನೂ ॥ ಅಮರವಂದಿತನಮೇಲೆ ಕರೆಯಲಾಕಮಲಾಕ್ಷಪಿತನಅಡಿ
ಗೇ ॥ ೧ ॥ ಯರಗಲಪ್ಪುತಕುವರನಾ । ಕೇಳಿದಳುಅರವಿಂದನೇತ್ರೆ
ಯನ್ನಾ । ಭರದಿಬೀಳ್ಕೊಂಡು ನೀನೂ । ಪೋದಾತವಿರಚಿಸಿದೆಯೇ
ನದರನೂ ॥ ೨ ॥ ಒರೆಯುನಲುನೀಪೇಳಿದಾವೋಲಾನು । ತಿರುಗಿ
ಭೂಮಿಯಲಿನೃಪರಾ । ತರಿದವರಕಂಠದಿಂದಾ । ವಾದ್ಯವಿದವಿರಚಿಸಿ
ದೆನೀಕ್ಷಿಸೆಂದಾ ॥ ೩ ॥ ಯನಲಪ್ಪಿನಿಜಕುವರಗೇ । ಪೇಳಿದಳುವನ
ಜಾಕ್ಷನೀನುನಿನಗೇ । ಜನಪತೀಗಿದರೆಯನಲು । ಹರಿತನ್ನಜನನಿ
ಗಿಂತೆಂದನೊಲಿದೂ ॥ ೪ ॥ ಅರಸರೆಲ್ಲರನುನಾನು ಕೊಂದುದಕೆ
ಪರಿಚಿತವದೇನದರನೂ ॥ ಕರುಣದಿಬೆಸಸಿಯನಲೂ । ನಿಜಸುತಗೆತರ
ಳಾಕ್ಷಿಯಿಂತೆಂದಳೂ ॥ ೫ ॥ ಕರಸಿಭೂಸುರಜನರಿಗೇ । ಧಾರುಣಿ
ಯಭರದಿಕೊಡುದೋಷನಿನಗೇ। ಹರಿವುದೆನಲಾಪರಿಯೊಳೂ । ವಿರಚಿ
ಸಿದಮುರವೈರಿಯಾಕ್ಷಣದೊಳೂ ॥ ೬ ॥

ಭಾಮಿನಿ ॥ ಬಳಿಕಲುತ್ಸವದಿಂದ ಲಕ್ಷ್ಮಿರಮಣವಾತಾಪಿ
ತ್ರಸಮೇತದಿಯಿಳೆಯರಸಹೃದ್ಭೀಮನೆಸಗಿನನನಸೂಯೆಯಾತ್ಮಜನಾ
ಹೊಳವಪುಣ್ಯಾತ್ರವಾದ ಸಜ್ಜನರೊಳಗೆ ದಯೆಯುತನಾಗಿನೆಲಸಿದೆ
ಖಳಮಥನಸತ್ಕಥನ ಜಯಜಯವೆಂದೊಲಿದುದ ಮರಗಣಾ ॥ ೧ ॥

ವಾರ್ಧಿಕ್ಯಾ ॥ ಮುನಿಪಕೇಳಂದು ಬಾರ್ಗವಭಾರಯಷ್ಟಿಯೊ
ಳ್ ಜನನಿಯತರಿವಾಗ ಭಾರವಾದೆಡೆಗಳೊಳ್ । ಧನುಜಹರನಿಳು
ಹಲವಲ್ಲಲ್ಯಲ್ಲೊಂದು ರೂಪದಿಂದರ್ವತ್ತಮೂರೆಡೆಯೊಳೂ॥ ಮನು
ಜರಿಂಪೂಜೆಯಂಗೊಳುತ ನಿಂದಳ್ಲೋಕಜನನಿ ಬಳಿಕೈತಂದುಚಂ
ದ್ರಗುತ್ತಿಯ ಪುರದಿಮಿನುಗುತಿಹಗೋಮಂತ ಶೈಲಕುಹರದೊಳೆಸ
ದಳೇನೆಂಬೆನುತ್ಸಹದೊಳೂ ॥ ೧ ॥ ಯಿಳೆಯೊಳುಳ್ಳಖಿಳಜನರಿಕಪ್ಪವ
ಗೊಳುತವರವಾಂಛಿತವನಿತ್ತು ಪೊರದಳ್ನರರಮುಳುಗಿದರೆ ಪಾಪ
ಮಂಪರಿಹರಿಪಕೋಟಿತೀರ್ಥದಲಿಯಿಂದೂ॥ ಬಳಹರನಮಾತೆಯಂ

ಕಂಡವರ ಅಘಕಾಲಗಳನಂಬಕಾಗ್ನಿಗೀಡಾದ ಪುರದಂತಪ್ಪುದಳಿದ ಮಾತೇನುಕೈವಲ್ಯಮಂ ಕರುಣಿಸುವ ರಾಮೇಶಸಖಶ್ರೀಶನಾ ॥೨॥ ಧರೆಯೊಳುತ್ತಮವಾದ ಚಂಡಿಕಾವರನದಿಯತಟದೊಳಗೆ ಶೋಭಿಸು ವಪರಮಲವಣಾ ಪುರದಿಭೈರವನಾತ್ಮಭವನಾದ ॥ ಪರಮಗುರು ವಾಂಗಿರಸಗೋತ್ರಜತರಳ ತಿರಮಲನೆಂಬಬಾಲಕನು ಬರದುಮುಗಿ ಸಿದನಿದನುಭಾರ್ಗವರಾಮನ ಕರುಣದಲೀ॥ ೩ ॥ ಮೆರವಪ್ಲಾವಂಗ ನಾಮಸಂವತ್ಸರದಿ ಸ್ಥಿರವೆನಿಪನಿಜಜೇಷ್ಠ ಕೃಷ್ಣಪಕ್ಷದೊಳ್ ಚತು ರ್ದಸಿಸೋಮವಾಸರದಿ ಬರದುಮುಗಿದಿಹುದು ಈಕೃತಿಯೂ ॥ ಅರಿ ತಜಾಣರುತಿದ್ದಿ ಮೆರಸುವುದು ಈಕೃತಿಯಕರದೋಷವಿರಲದನು ಪರ ಮಪುರುಷನದಿವ್ಯಚರಿತೆಯಂದರಿತು ಮೆರಸುವದುಬುಧರೂ ॥ ೪ ॥

ಮಂಗಳಪದ ॥ ಧರೆಯೊಳುತ್ತಮರಂಗಧಾಮನಿಗೇ । ಪರಮಪುರು ಷಶ್ರೀನಿವಾಸನಿಗೇ। ಉರಗಾರಿಗಮನಗೇವರದವೆಂಕಟನಿಗೆ । ರೇಣು ಕಾತ್ಮಜಹರಿಭಾರ್ಗವಗೇ । ಮಂಗಳಂ ॥ ೧ ॥ ತನುವೆಂಬದೈತ್ಯನ ಸೀಳಿದಗೇ । ಅಮರರಿಗಮೃತವನೆರದವಗೇ । ಸುಮುನನಾದಿಗಳಿಗ ಭಯವನಿತ್ತಗೆ। ಜಮದಗ್ನಿತರಳಗೆಭಾರ್ಗವಗೇ ಮಂಗಳಂಜಯ ಮಂಗಳಂ ॥ ೨ ॥ ಧಾತ್ರಿಯನೊಯ್ದನ ಸೀಳಿದಗೇ । ನೇತ್ರಭಯಂ ಕರನರಸಿಂಹಗೇ । ಗೊತ್ರೇಯನಳಿದವಾಮನಮೂರ್ತಿಗೇ। ಕ್ಷತ್ರ ಕುಲಾಂತಕಭಾರ್ಗವಗೇ । ಮಂಗಳಂಜಯ ಮಂಗಳಂ ॥ ೩ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಂತು ಸಂದಿ ೧ಕ್ಕು ಪದನು ೪೪೫ಕ್ಕಂ ಮಂಗಳಮಹಾ

ಇದನ್ನು ಬರದಾತ ಗುಜ್ಜಾಡಿ ಪರಮೇಶ್ವರ ಬಾಳಿಗನ ಬರಹ.

ನಮ್ಮಲ್ಲಿ ದೊರೆಯುವ ಯಕ್ಷಗಾನ ಮತ್ತು

ನಾಟಕ ಗ್ರಂಥಗಳಲ್ಲಿ ಕೆಲವು

ಯಕ್ಷಗಾನ ಹರಿಶ್ಚಂದ್ರಮಹಾರಾಯನ ಕಥೆ.	೦	೧೨	೦
ನಳಚರಿತ್ರೆ ಯಕ್ಷಗಾನ	೦	೪	೦
ಗಂಗೇಗೌರಿ ಸಂವಾದ.	೦	೪	೦
ಕೃಷ್ಣಾರ್ಜುನರಕಾಳಗ	೦	೨	೦
ಬಾಣಾಸುರನಕಥೆ.	೦	೪	೦
ಸಾರಂಗಧರಚರಿತ್ರೆ.	೦	೩	೦
ಪಾರ್ವತೀಕೊರವಂಜಿಕಥೆ.	೦	೨	೦
ಶಶಿರೇಖಾಪರಿಣಯ ಯಕ್ಷಗಾನ.	೦	೪	೦
ಸುಭದ್ರಾಪರಿಣಯ.	೦	೪	೦
ಕರ್ಣಾರ್ಜುನರಕಾಳಗ.	೦	೩	೦
ಮೂರುವರೆ ವಜ್ರದಹರಿಕಥೆ.	೦	೨	೦
ಐರಾವತ.	೦	೨	೦
ಅನಸೂಯಾಕಥೆ ಮತ್ತು ಧ್ರುವಚರಿತ್ರೆ.	೦	೩	೦
ಸಾನಂದಗಣೇಶನಕಥೆ ಯಮಪಟ್ಟಣದ ವಿಸ್ತಾರ.	೦	೪	೦
ವಿರಾಟಪರ್ವ.	೦	೩	೦
ಕರೀಭಂಟನಕಥೆ ಟೀಕುಸಹ.	೦	೪	೦
ಪ್ರಹ್ಲಾದಚರಿತ್ರೆ.	೦	೪	೦
ಚೋರಕಥೆ.	೦	೪	೦
ಕೃಷ್ಣಸಂಧಾನ.	೦	೩	೦
ಅಭಿಮನ್ಯುಕಾಳಗ.	೦	೨	೦
ಕುಶಲವರಕಾಳಗ.	೦	೨	೦
ವಾಲೀಸುಗ್ರೀವರಕಾಳಗ.	೦	೨	೦
ಇಂದ್ರಜಿತ್ತು ಕಾಳಗ.	೦	೧	೦
ರಾಮಾಶ್ವಮೇಧ.	೦	೩	೦
ಘಟೋತ್ಕಜನಕಾಳಗ.	೦	೩	೦

ವಾಜಪೇಯಂ ಕೃಷ್ಣಯ್ಯ.

ಬೆಂಗಳೂರು ಸಿಟಿ ಬುಕ್‌ಡಿಪೋ, ಚಿಕ್ಕಪೇಟೆ.